# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮೇ 06, 2021

ಸಂಪುಟ : 47  ಸಂಚಿಕೆ : 353  ☎ 254736  91642 99999  RNI No: 27369/75,  KA/SK/CTA-275/2021-2023. O/P @ J.D. Circle P.O.  ಪುಟ : 4  ರೂ : 4.00  www.janathavani.com  janathavani@mac.com




ದಾವಣಗೆರೆ : ಅರೆ ಬರೆ ಧರಿಸಿದ ಮಾಸ್ಕ್, ಒಬ್ಬರ ಮೇಲೊಬ್ಬರು ಬೀಳುವಂತೆ ನಿಲ್ಲುವುದು, ಅಂತರವಿಲ್ಲದೇ ನಿರ್ಲಕ್ಷ್ಯ, ಉದ್ದನೆಯ ಸರದಿ... ಇವು ನಗರದ ಕೊರೊನಾ ಲಸಿಕಾ ಕೇಂದ್ರಗಳ ಬಳಿ ಕಂಡು ಬಂದ ದೃಶ್ಯಗಳು.

# ಲಸಿಕಾ ಕೇಂದ್ರಗಳಲ್ಲಿ ರಶ್ಶೋ ರಶ್...

ದಾವಣಗೆರೆ, ಮೇ 5 - ಶುಕ್ರವಾರ ಸ್ಥಗಿತಗೊಂಡಿದ್ದ ಕೊರೊನಾ ಲಸಿಕೆ ವಿತರಣೆ ಬುಧವಾರ ಆರಂಭವಾಗಿತ್ತು. ಏರುತ್ತಿರುವ ಕೊರೊನಾ ಸೋಂಕುಗಳ ನಡುವೆ, ಲಸಿಕೆಗೆ ಇನ್ನಿಲ್ಲದ ಬೇಡಿಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಜನರು, ಅದರಲ್ಲೂ ವಯೋವೃದ್ಧರು ದೊಡ್ಡ ಸಂಖ್ಯೆಯಲ್ಲಿ ಲಸಿಕಾ ಕೇಂದ್ರಗಳ ಎದುರು ಜಮಾಯಿಸಿದ್ದರು.

ನಗರದ ಎಂಸಿಸಿ ಎ ಬ್ಲಾಕ್‌ನಲ್ಲಿರುವ ಸೂಪರ್‌ಮಾರ್ಕೆಟ್‌ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜನರು ಬೆಳಿಗ್ಗೆ 6-7 ಗಂಟೆಯಿಂದಲೇ ಸರದಿಯಲ್ಲಿ ನಿಂತಿದ್ದರು. ಎರಡನೇ ಕಂತಿನ ಡೋಸ್ ಪಡೆಯುವವರಿಗೆ ಮಾತ್ರ ಇಂದು ಲಸಿಕೆ ನೀಡಲಾಗುವುದು ಎಂದು ತಿಳಿಸಲಾಗಿತ್ತು. ಆದರೂ, ಮೊದಲ ಬಾರಿಗೆ ಲಸಿಕೆ ಪಡೆಯುವವರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದರು.



ಆರೋಗ್ಯ ಕೇಂದ್ರದ ವೈದ್ಯರಾದ ಡಾ. ನಟರಾಜ್, ಸರ್ಕಾರದ ಸೂಚನೆಯಿಂದ 45 ವರ್ಷ ಮೀರಿದ ಹಾಗೂ ಎರಡನೇ ಕಂತಿನ ಲಸಿಕೆಯವರಿಗೆ ಮಾತ್ರ ಕೊಡಲಾಗುವುದು. ಉಳಿದರೆ ಮಾತ್ರ ಮೊದಲ ಕಂತಿನವರಿಗೆ ಕೊಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಪಾಲಿಕೆ ಪ್ರತಿಪಕ್ಷದ ನಾಯಕ ಎ. ನಾಗರಾಜ್, ಆರೋಗ್ಯ ಕೇಂದ್ರಕ್ಕೆ 100 ಲಸಿಕೆಗಳನ್ನು ನೀಡಲಾಗಿತ್ತು. ಜಿಲ್ಲಾ ಆರೋಗ್ಯಾಧಿಕಾರಿಗಳ ಜೊತೆ ಮಾತನಾಡಿದ ನಂತರ 200 ಲಸಿಕೆಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

**ಕಾಣದ ಕೊರೊನಾ ಮುನ್ನೆಚ್ಚರಿಕೆ :** ಲಸಿಕಾ ಕೇಂದ್ರದ ಮುಂದೆ ನೂರಾರು ಜನರು ಗುಂಪಾಗಿ ನಿಂತಿದ್ದರು. ಪೊಲೀಸರು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ತಿಳಿಸಿದ್ದೂ ಪ್ರಯೋಜನಕ್ಕೆ ಬರಲಿಲ್ಲ. (3ನೇ ಪುಟಕ್ಕೆ)



## ಅಪ್ಪ - ಅಮ್ಮನಿಗೆ ಲಸಿಕೆ ಪಡೆಯಲು ಅಲೆದಾಟ

ತಮ್ಮ 56 ವರ್ಷದ ತಂದೆ ಹಾಗೂ 50 ವರ್ಷದ ತಾಯಿಗಾಗಿ ಲಸಿಕೆ ಪಡೆಯಲು ವಾರದಿಂದ ಅಲೆದಾಡುತ್ತಿದ್ದೇನೆ. ಆದರೆ, ಇದುವರೆಗೂ ಸಾಧ್ಯವಾಗಿಲ್ಲ ಎಂದು ಸಿ.ಜಿ. ಆಸ್ಪತ್ರೆಯ ಬಳಿಯ ಲಸಿಕಾ ಕೇಂದ್ರಕ್ಕೆ ಬಂದಿದ್ದ ನಗರದ ಪದ್ಮ ಎಂಬುವವರು ತಿಳಿಸಿದರು.

ನಿವೃತ್ತ ಶಿಕ್ಷಕರಾದ ಮರುಳಸಿದ್ದಪ್ಪ ಅವರು ತಮ್ಮ ಪತ್ನಿಗಾಗಿ ಲಸಿಕೆ ಸಿಗುವುದೇ ಎಂಬ ಹುಡುಕಾಟದಲ್ಲಿದ್ದರು. ನಾನು ಈಗಾಗಲೇ ಎರಡು ಡೋಸ್ ಲಸಿಕೆ ಪಡೆದುಕೊಂಡಿದ್ದೇನೆ ಎಂದ ಅವರು, ಖಾಲಿ ಇದ್ದಾಗ ಪತ್ನಿ ಲಸಿಕೆಗೆ ಹಿಂಜರಿದರು. ಈಗ ಲಸಿಕೆ ಬೇಕೆಂದರೂ ಇಷ್ಟು ಉದ್ದನೆಯ ಸರದಿಯಲ್ಲಿ ನಿಲ್ಲಲು ಅವರಿಂದ ಸಾಧ್ಯವಾಗದು ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

## ಕೋವ್ಯಾಕ್ಸಿನ್‌ಗೆ ಪರದಾಟ

ಜಿಲ್ಲೆಯಲ್ಲಿ ಮಂಗಳವಾರ ಕೊವೀಶೀಲ್ಡ್ ಲಸಿಕೆ ಬಂದಿದೆ. ಈ ಹಿಂದೆ ಕೊವ್ಯಾಕ್ಸಿನ್‌ನ ಮೊದಲ ಡೋಸ್ ಪಡೆದವರು ಎರಡನೇ ಡೋಸ್‌ಗೆ ಹುಡುಕಾಟ ನಡೆಸಿದ್ದರು.

ಕೋವ್ಯಾಕ್ಸಿನ್ ಯಾವಾಗ ಬರುತ್ತದೋ ಗೊತ್ತಿಲ್ಲ.

ಈ ಬಗ್ಗೆ ಸರ್ಕಾರವೇ ಪ್ರಕಟಣೆ ನೀಡಬೇಕು ಎಂದು ಲಸಿಕೆ ಪಡೆಯಲು ಬಂದವರಿಗೆ ಲಸಿಕಾ ಕೇಂದ್ರದವರು ಉತ್ತರಿಸುತ್ತಿದ್ದರು.

## ಅಂತರಕ್ಕೆ ಆನ್‌ಲೈನ್ ಸೂಕ್ತ

ಆನ್‌ಲೈನ್ ಮೂಲಕ ಲಸಿಕೆಗೆ ನೋಂದಾಯಿಸಬೇಕು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಅದರಂತೆ ಆನ್‌ಲೈನ್ ನೋಂದಣಿ ಮಾಡಿಸಿಕೊಂಡವರಿಗೆ ಲಸಿಕಾ ಕೇಂದ್ರದಲ್ಲಿ ಆದ್ಯತೆ ನೀಡಲು ವ್ಯವಸ್ಥೆ ಮಾಡಿದರೆ ಜನಜಂಗುಳಿ ತಪ್ಪಲಿದೆ.

ಇಲ್ಲವಾದರೆ, ಕೊರೊನಾ ಲಸಿಕಾ ಕೇಂದ್ರಗಳೇ ಸೋಂಕು ಹರಡುವ ಕೇಂದ್ರಗಳಾಗುವ ವಿಚಿತ್ರ ಪರಿಸ್ಥಿತಿ ಉಂಟಾಗಬಹುದು.

## ಕೊರೊನಾ ಲಸಿಕೆ ಮಾಹಿತಿಗೆ ಆದೇಶ

ಬೆಂಗಳೂರು, ಮೇ 5 – ಅನಾವಶ್ಯಕ ಗೊಂದಲ ತಪ್ಪಿಸಲು ಕೊರೊನಾ ಲಸಿಕೆ ವಿತರಣೆ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯಲ್ಲಿ ಕಾರ್ಯನಿರತ ಲಸಿಕಾ ಕೇಂದ್ರಗಳು, ಪ್ರತಿದಿನ ಕೈಗೊಳ್ಳಲಾಗುವ ಲಸಿಕಾಕರಣದ ಸಂಖ್ಯೆ, ಲಸಿಕೆಯ ಲಭ್ಯತೆ ಹಾಗೂ ಆನ್‌ಲೈನ್ ಮೂಲಕ ನೋಂದಾಯಿತ ಫಲಾನುಭವಿಗಳಿಗೆ ಲಸಿಕೆ ನೀಡುವ ಬಗ್ಗೆ ಮಾಹಿತಿ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರತಿದಿನ ಮಾಧ್ಯಮ ಪ್ರಕಟಣೆ, ಜಿಲ್ಲಾ ವೆಬ್ ಸೈಟ್, ಸ್ಥಳೀಯ ಸಂಸ್ಥೆಗಳೂ ಸೇರಿದಂತೆ ಹಲವು ಮಾರ್ಗಗಳ ಮೂಲಕ ಮಾಹಿತಿ ನೀಡುವಂತೆ ತಿಳಿಸಲಾಗಿದೆ.

## ಒಂದೇ ದಿನ 50 ಸಾವಿರ ಸೋಂಕು

**ಎರಡನೇ ಅಲೆ ಇನ್ನಷ್ಟು ಉಲ್ಬಣ**

ಬೆಂಗಳೂರು, ಮೇ 5 – ರಾಜ್ಯದಲ್ಲಿ ಒಂದೇ ದಿನ 50 ಸಾವಿರಕ್ಕೂ ಹೆಚ್ಚು ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಬುಧವಾರ ದಾಖಲೆ ಪ್ರಮಾಣದ ಸೋಂಕಿತರು ಕಂಡು ಬಂದಿದ್ದು, 346 ಜನ ಸಾವನ್ನಪ್ಪಿದ್ದಾರೆ.

ಇದರಿಂದಾಗಿ ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 4.87 ಲಕ್ಷಕ್ಕೆ ತಲುಪಿದೆ. ಸಕ್ರಿಯ ಸೋಂಕಿತರಲ್ಲಿ ಮಹಾರಾಷ್ಟ್ರದ ನಂತರ ಎರಡನೇ ರಾಜ್ಯ ಕರ್ನಾಟಕವಾಗಿದೆ.

ಇದೇ ದಿನ 26,841 (3ನೇ ಪುಟಕ್ಕೆ)

# ಕೊರೊನಾ ಮೂರನೇ ಅಲೆ ನಿಶ್ಚಿತ : ಕೇಂದ್ರ

ನವದೆಹಲಿ, ಮೇ 5 – ಕೊರೊನಾದ ಮೂರನೇ ಅಲೆ ತಪ್ಪಿಸಲಾಗದು ಎಂದು ಕೇಂದ್ರ ಸರ್ಕಾರ ತಿಳಿಸಿದ್ದು, ಈ ಅಲೆ ಯಾವಾಗ ಬರುತ್ತದೆ ಎಂಬುದನ್ನೂ ಊಹಿಸಲಾಗದು ಎಂದು ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು, ಪ್ರಸಕ್ತ ಕಂಡು ಬರುತ್ತಿರುವ ಕೊರೊನಾ ಅಲೆಯ ಆರ್ಭಟ ಯಾವಾಗ ತಗ್ಗಲಿದೆ ಎಂಬುದನ್ನು ಊಹಿಸಲಾಗದು ಎಂದು ಹೇಳಿದೆ.

ಕರ್ನಾಟಕ ಸೇರಿದಂತೆ ಹನ್ನೆರಡು ರಾಜ್ಯಗಳಲ್ಲಿ ಪ್ರಸಕ್ತ ಲಕ್ಷಕ್ಕೂ ಹೆಚ್ಚು ಸಕ್ರಿಯ ಸೋಂಕಿತರಿದ್ದಾರೆ. ಕರ್ನಾಟಕ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ರಾಜಸ್ಥಾನ ಹಾಗೂ ಬಿಹಾರಗಳಲ್ಲಿ ಸೋಂಕಿತರ ಸಂಖ್ಯೆ ದಿನೇ ದಿನೇ ಏರುತ್ತಿದೆ.

24 ರಾಜ್ಯಗಳು ಹಾಗೂ (3ನೇ ಪುಟಕ್ಕೆ)

## ಎರಡನೇ ಅಲೆ ತೀವ್ರತೆ ಅಂದಾಜಿಸಿರಲಿಲ್ಲ

ನವದೆಹಲಿ, ಮೇ 5 – ಕೊರೊನಾ ಎರಡನೇ ಅಲೆಯ ತೀವ್ರತೆಯನ್ನು ಅಂದಾಜಿಸಿರಲಿಲ್ಲ ಎಂದು ಹೇಳಿರುವ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ. ವಿಜಯ ರಾಘವನ್, ಕೊರೊನಾ ರೂಪಾಂತರಗೊಂಡಂತೆ ಹೊಸ ಅಲೆಗಳಿಗೆ ಸಿದ್ಧವಾಗಿರಬೇಕಾದ ಅಗತ್ಯವಿದೆ ಎಂದಿದ್ದಾರೆ.

ಬ್ರಿಟನ್ ಹಾಗೂ ಡಬಲ್ ಮ್ಯುಟೆಂಟ್ ರೀತಿಯ ಹೊಸ ರೂಪಾಂತರಿ ಕೊರೊನಾ ವಿರುದ್ಧ ಲಸಿಕೆಗಳು (3ನೇ ಪುಟಕ್ಕೆ)

## ಕೋವ್ಯಾಕ್ಸಿನ್ ಮೊದಲ ಡೋಸ್‌ಗೆ ತಡೆ

**ಜಿಲ್ಲೆಯಲ್ಲಿ 6 ಸಾವಿರ ಕೋವಿಶೀಲ್ಡ್ ಲಸಿಕೆ ವಿತರಣೆ**

ದಾವಣಗೆರೆ, ಮೇ 5 – ಜಿಲ್ಲೆಯಲ್ಲಿ ಬುಧವಾರದಂದು ಹಲವಾರು ಸರ್ಕಾರಿ ಲಸಿಕಾ ಕೇಂದ್ರಗಳ ಮೂಲಕ 6,105 ಕೋವಿಶೀಲ್ಡ್ ಲಸಿಕೆಗಳನ್ನು ವಿತರಿಸಲಾಗಿದೆ. ಲಸಿಕೆ ಪಡೆದವರಲ್ಲಿ ಬಹುತೇಕರು ಎರಡನೇ ಡೋಸ್‌ನವರಾಗಿದ್ದಾರೆ.

ಜಿಲ್ಲೆಗೆ ಮಂಗಳವಾರದಂದು 9,500 ಡೋಸ್ ಲಸಿಕೆ ಬಂದಿತ್ತು. ಇದನ್ನು ಲಸಿಕಾ ಕೇಂದ್ರಗಳಿಗೆ ವಿತರಿಸಲಾಗಿದೆ. ಬುಧವಾರದಂದು 6,105 ಡೋಸ್ ಲಸಿಕೆಗಳನ್ನು ವಿತರಿಸಲಾಗಿದೆ. ಈ ಪೈಕಿ 5,000 ಡೋಸ್‌ಗಳನ್ನು ಎರಡನೇ ಬಾರಿ ಪಡೆಯುತ್ತಿರುವವರಿಗೆ ನೀಡಲಾಗಿದೆ. ಉಳಿದ ಸಾವಿರದಷ್ಟು ಡೋಸ್‌ಗಳನ್ನು ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ನೀಡಲಾಗಿದೆ.

ತಾಲ್ಲೂಕುಗಳಲ್ಲಿ ಇನ್ನೂ ಮೂರೂವರೆ ಸಾವಿರದಷ್ಟು ಲಸಿಕೆ ಇದ್ದು, ಇದನ್ನು ನಾಳೆ ಗುರುವಾರ ನೀಡಲಾಗುವುದು. ಬುಧವಾರ ಜಿಲ್ಲೆಗೆ ಯಾವುದೇ ಲಸಿಕೆ ಬಂದಿಲ್ಲ ಎಂದು ಜಿಲ್ಲೆಯಲ್ಲಿ ಲಸಿಕೆಯ ನೋಡಲ್ (2ನೇ ಪುಟಕ್ಕೆ)

# ಮರಾಠ ಮೀಸಲಾತಿ ಸಂವಿಧಾನ ಬಾಹಿರ: ಸುಪ್ರೀಂ ಕೋರ್ಟ್

**ಮೀಸಲಾತಿ ಶೇ.50ರ ಮಿತಿ ಹೆಚ್ಚಿಸಲು ನಕಾರ**

ನವದೆಹಲಿ, ಮೇ 4 – ಆಡಳಿತ ಹಾಗೂ ಸರ್ಕಾರಿ ಹುದ್ದೆಗಳಲ್ಲಿ ಮಹಾರಾಷ್ಟ್ರದ ಮರಾಠ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲು ಮಹಾರಾಷ್ಟ್ರ ಸರ್ಕಾರ ರೂಪಿಸಿದ್ದ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದ್ದು, ಇದು ಸಂವಿಧಾನ ಬಾಹಿರ ಎಂದು ಹೇಳಿದೆ.

1992ರ ಮಂಡಲ್ ವರದಿಯಲ್ಲಿ ವಿಧಿಸಿದ ಶೇ.50ರ ಮೀಸಲಾತಿ ಮಿತಿಯನ್ನು ಮೀರುವ ವಿಶಿಷ್ಟ ಸಂದರ್ಭ ಮರಾಠ ಮೀಸಲಾತಿ ವಿಷಯದಲ್ಲಿ ಎದುರಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಮಂಡಲ್ ತೀರ್ಪಿನ ಮರು ಪರಿಶೀಲನೆಗಾಗಿ ವಿಸ್ತೃತ ಪೀಠಕ್ಕೆ ವಹಿಸಬೇಕು ಎಂಬ ಮನವಿಯನ್ನು ತಳ್ಳಿ ಹಾಕಿರುವ ಸುಪ್ರೀಂ ಕೋರ್ಟ್, ಕಾಲಾನುಕಾಲಕ್ಕೆ ಹಲವಾರು ತೀರ್ಪುಗಳಲ್ಲಿ ಮಂಡಲ್ ತೀರ್ಪನ್ನು ಎತ್ತಿ ಹಿಡಿಯಲಾಗಿದೆ ಎಂದು ತಿಳಿಸಿದೆ.

ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ತೀರ್ಪು ನೀಡಿದ್ದು, ಮರಾಠ ಮೀಸಲಾತಿಗಾಗಿ ಶಿಫಾರಸ್ಸು ಮಾಡಿದ್ದ ಎಂ.ಸಿ. ಗಾಯಕ್ವಾಡ್ ಆಯೋಗ, ಈ ಮೀಸಲಾತಿಗಾಗಿ ವಿಶಿಷ್ಟ ಪರಿಸ್ಥಿತಿ ಏನು ಎಂಬುದನ್ನು ತಿಳಿಸಿಲ್ಲ ಎಂದು ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎಲ್.ಎನ್. ರಾವ್, ಹೇಮಂತ್ ಗುಪ್ತ, ಎಸ್. ಅಬ್ದುಲ್ ನಜೀರ್ ಹಾಗೂ ಎಸ್. ರವೀಂದ್ರ ಭಟ್ ಅವರಿದ್ದಾರೆ.

ಸಾಮಾಜಿಕವಾಗಿ ಹಾಗೂ (3ನೇ ಪುಟಕ್ಕೆ)

## ರಾಜ್ಯಕ್ಕೆ 1200 ಮೆಟ್ರಿಕ್ ಟನ್ ಆಕ್ಸಿಜನ್

### ಕೇಂದ್ರಕ್ಕೆ ಹೈಕೋರ್ಟ್ ಆದೇಶ

ಬೆಂಗಳೂರು, ಮೇ 5 - ಕೊರೊನಾ ಸೋಂಕಿತರ ನೆರವಿಗೆ ಮಧ್ಯೆ ಪ್ರವೇಶಿಸಿರುವ ರಾಜ್ಯ ಹೈಕೋರ್ಟ್, ತಕ್ಷಣವೇ ಪ್ರತಿನಿತ್ಯ 1200 ಮೆಟ್ರಿಕ್ ಟನ್ ಆಕ್ಸಿಜನ್ ಪೂರೈಸುವಂತೆ ಕೇಂದ್ರಕ್ಕೆ ಆದೇಶ ಮಾಡಿದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕ ಹಾಗೂ ನ್ಯಾಯಮೂರ್ತಿ ಅರವಿಂದ್‌ಕುಮಾರ್ ವಿಶೇಷ ವಿಚಾರಣೆ ಪೀಠ ಇಂದು ರೋಗಿಗಳಿಗೆ ಸಂಬಂಧಿಸಿದಂತೆ ಅನುಭವಿಸುತ್ತಿರುವ ನೋವುಗಳನ್ನು ಪರಾಮರ್ಶಿಸಿ, ತಕ್ಷಣವೇ ಪ್ರತಿನಿತ್ಯ 1200 ಮೆಟ್ರಿಕ್ ಟನ್ ಆಕ್ಸಿಜನ್ ಅನ್ನು ರಾಜ್ಯ ಸರ್ಕಾರಕ್ಕೆ ಪ್ರತಿದಿನ ಪೂರೈಸುವಂತೆ ಕೇಂದ್ರಕ್ಕೆ ಆದೇಶ ಮಾಡಿದೆ.

ಮೇ 3 ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ 24 ಕೋವಿಡ್ ರೋಗಿಗಳ ಸಾವಿನ (3ನೇ ಪುಟಕ್ಕೆ)

## ಹೈಕೋರ್ಟ್ ಪ್ರವೇಶದ ಬೆನ್ನಲ್ಲೇ ನ್ಯಾಯಿಕ ತನಿಖೆ

**ಸರ್ಕಾರದ ಕ್ರಮಕ್ಕೆ ನ್ಯಾಯಾಲಯದ ಆಕ್ಷೇಪ**

ಬೆಂಗಳೂರು, ಮೇ 5 - ಚಾಮರಾಜನಗರ ಜಿಲ್ಲಾ ಸ್ಪತ್ರೆಯಲ್ಲಿ ಕೋವಿಡ್ ಸೋಂಕಿನಿಂದ ರೋಗಿಗಳ ಸಾವಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ನೇತೃತ್ವದಲ್ಲಿ ಏಕ ಸದಸ್ಯ ಸಮಿತಿ ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರದ ಈ ನಡವಳಿಕೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಹೈಕೋರ್ಟ್, ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂಬ ತೀರ್ಮಾನ ಕೈಗೊಳ್ಳ ಲಾಗಿತ್ತು. ನ್ಯಾಯಮೂರ್ತಿ ನೇಮಕಾತಿಯೂ ನಮ್ಮಿಂದಲೇ ಆಗುತ್ತಿತ್ತು. ಆದರೆ, ಸರ್ಕಾರ ಈ ನೇಮಕಾತಿ ನಡವಳಿಕೆಗೆ ಅಸಮಾಧಾನ ವಿದೆ ಎಂದು ಪೀಠ ಹೇಳಿದೆ.

ನ್ಯಾಯಮೂರ್ತಿಗಳ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಸರ್ಕಾರದ ನಡಾವಳಿಕೆ ಬಗ್ಗೆ ನಮಗೆ ಅಸಮಾಧಾನವಿದೆ ಎಂದು ತಿಳಿಸಿದೆ.

ಬೇಸಿಗೆ ರಜೆ ಸಂದರ್ಭದಲ್ಲೂ ಆಹಾರ ಭದ್ರತೆ, ರೋಗಿಗಳಿಗೆ ಹಾಸಿಗೆ ಒದಗಿಸುವುದು, ಸಮರ್ಪಕವಾಗಿ ಔಷಧಿ ಹಾಗೂ ಆಕ್ಸಿಜನ್ (3ನೇ ಪುಟಕ್ಕೆ)

## ಬೇಸಿಗೆ ರಜೆ ಅವಧಿ ಪರಿಷ್ಕರಣೆ

ಬೆಂಗಳೂರು, ಮೇ 5 - ಕೊರೊನಾ ದಿನದಿಂದ ದಿನಕ್ಕೆ ರಾಜ್ಯದಲ್ಲಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಶಾಲೆಗಳ ಬೇಸಿಗೆ ರಜಾ ಅವಧಿಯನ್ನು ಸರ್ಕಾರ ಪರಿಷ್ಕರಿಸಿದೆ.

ಪ್ರಾಥಮಿಕ ಶಾಲೆಗಳಿಗೆ ಈ ಹಿಂದೆಯೇ ತಿಳಿಸಿದಂತೆ ಜೂನ್ 14 ರವರೆಗೆ ಬೇಸಿಗೆ ರಜೆ ನೀಡಲಾಗಿದೆ. ಜೂನ್ 15 ರಿಂದ 2021-22ನೇ ಸಾಲಿನ ಹೊಸ ಶೈಕ್ಷಣಿಕ ವರ್ಷ ಆರಂಭವಾಗಲಿದೆ.

ಆದರೆ, ಪ್ರೌಢ ಶಾಲೆಗಳಿಗೆ ಮೇ 31 ರವರೆಗೆ ಬೇಸಿಗೆ ರಜೆ ನೀಡಲಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಜೂನ್ 21 ರಿಂದ ಜುಲೈ 5ರವರೆಗೆ ಈಗಾಗಲೇ ನಿಗದಿಯಾದಂತೆ ವಾರ್ಷಿಕ ಪರೀಕ್ಷೆಗಳು ನಡೆಯಲಿವೆ.

ಪ್ರೌಢ ಶಾಲೆಗಳ 8, 9, (3ನೇ ಪುಟಕ್ಕೆ)

## ಆಸ್ತಿ ತೆರಿಗೆ ವಿನಾಯಿತಿ ವಿಸ್ತರಣೆ

ಬೆಂಗಳೂರು, ಮೇ 5 – ಕೊರೊನಾ ಹಿನ್ನೆಲೆಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆಯ ಪಾವತಿಗೆ ನೀಡಲಾಗುತ್ತಿರುವ ಶೇ .5 ರ ರಿಯಾಯಿತಿ ಅವಧಿಯನ್ನು ರಾಜ್ಯ ಸರ್ಕಾರ ಜೂನ್ 30ರವರೆಗೆ ವಿಸ್ತರಿಸಿದೆ.

ಆಸ್ತಿ ತೆರಿಗೆಯನ್ನು ಆರ್ಥಿಕ ವರ್ಷದ ಏಪ್ರಿಲ್ ತಿಂಗಳಲ್ಲಿ ಪಾವತಿಸಿದಲ್ಲಿ ಆಸ್ತಿ ತೆರಿಗೆ ಮೊತ್ತದಲ್ಲಿ ಶೇ .5 ರಷ್ಟು ರಿಯಾಯತಿಯನ್ನು ನೀಡಲು ಅವಕಾಶವಿರುತ್ತದೆ . ಕೊರೊನಾ ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ 2021-22ನೇ (2ನೇ ಪುಟಕ್ಕೆ)


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ಜಿಲ್ಲೆಯಲ್ಲಿ ದಾಖಲೆಯ 548 ಸೋಂಕಿತರು

ದಾವಣಗೆರೆ, ಮೇ 5 – ಜಿಲ್ಲೆಯಲ್ಲಿ ಒಂದೇ ದಿನ ದಾಖಲೆಯ 548 ಕೊರೊನಾ ಸೋಂಕಿತರು ಬುಧವಾರ ಕಂಡು ಬಂದಿದ್ದು, ಇದೇ ದಿನ ಇಬ್ಬರು ಸಾವನ್ನಪ್ಪಿದ್ದಾರೆ. ಇಷ್ಟೊಂದು ಸಂಖ್ಯೆಯ ಕೊರೊನಾ ಸೋಂಕಿತರು ಒಂದೇ ದಿನ ಕಂಡು ಬಂದಿರುವುದು ಇದೇ ಮೊದಲು. (2ನೇ ಪುಟಕ್ಕೆ)

# ಇಎಸ್‌ಐ ಆಸ್ಪತ್ರೆಯಲ್ಲಿ 80 ಬೆಡ್ ವ್ಯವಸ್ಥೆ

ದಾವಣಗೆರೆ, ಮೇ 5- ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಕೋವಿಡ್ ಕೇರ್ ಸೆಂಟರ್ ತೆರೆಯಲು ನಗರದ ಇಎಸ್‌ಐ ಆಸ್ಪತ್ರೆಯಲ್ಲಿ 80 ಬೆಡ್ ವ್ಯವಸ್ಥೆಯುಳ್ಳ ಕೋವಿಡ್ ಸೆಂಟರ್ ತೆರೆಯುವ ಬಗ್ಗೆ ಪರಿಶೀಲಿಸಿ, ವೈದ್ಯರುಗಳೊಂದಿಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಚರ್ಚೆ ನಡೆಸಿದರು.

ಬುಧವಾರ ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಇಎಸ್‌ಐ ಆಸ್ಪತ್ರೆಯಲ್ಲಿ 40 ಆಕ್ಸಿಜನ್ ಮತ್ತು 40 ಐಸೋಲೇಷನ್ ಬೆಡ್‌ಗಳು ಸೇರಿದಂತೆ ಒಟ್ಟು 80 ಬೆಡ್‌ಗಳ ಕೋವಿಡ್ ಆಸ್ಪತ್ರೆಯನ್ನಾಗಿ ಮಾಡಲು ಬೇಕಾದ ಅಗತ್ಯತೆಗಳ ಬಗ್ಗೆ ಅಲ್ಲಿನ ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿದರು.



ಈ ವೇಳೆ ಇಎಸ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಸವನಗೌಡ ಮಾತನಾಡಿ, ಆಸ್ಪತ್ರೆಯಲ್ಲಿ ಆಕ್ಸಿಜನ್ ಮತ್ತು ವೆಂಟಿಲೇಟರ್ ವ್ಯವಸ್ಥೆಗೆ 19 ಪಾಯಿಂಟ್‌ಗಳು ಇದ್ದು, ಅದರಲ್ಲಿ 2 ಕಡೆ ಲೀಕೇಜ್ ಆಗುತ್ತಿದೆ. ಆಸ್ಪತ್ರೆಯಲ್ಲಿ ಒಬ್ಬ ಟೆಕ್ನೀಷಿಯನ್ ಇದ್ದು, ಇನ್ನೊಬ್ಬರ ಅಗತ್ಯವಿದೆ ಹಾಗೂ ಬೆಡ್, ಸಿಲಿಂಡರ್ ವ್ಯವಸ್ಥೆ, ಫ್ಯಾನ್ ಸೇರಿದಂತೆ ಮೂಲ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲ ಕೊರತೆ ಇದ್ದು, ಸಾಧ್ಯವಾದಷ್ಟು ಜಿಲ್ಲಾಡಳಿತಕ್ಕೆ ಸಹಾಯ ಮಾಡಲು ತಾವು ಬದ್ಧರಿದ್ದೇವೆ ಎಂದರು.

ಅರಿವಳಿಕೆ ತಜ್ಞೆ ಡಾ.ನಂದಿನಿ ಮಾತನಾಡಿ, ಆಸ್ಪತ್ರೆಯಲ್ಲಿ ಐಸಿಯು ಇಲ್ಲವಾದ್ದರಿಂದ ಇಲ್ಲಿರುವ ಸಿಬ್ಬಂದಿಗಳಿಗೆ ಐಸಿಯು ನಿರ್ವಹಣೆಯ ಅನುಭವ ಇಲ್ಲ. ಅವರಿಗೆ ಒಂದು ವಾರದ ಮಟ್ಟಿಗೆ ತರಬೇತಿ ಕೊಟ್ಟಲ್ಲಿ ಅನುಕೂಲವಾಗುತ್ತದೆ. ಈಗಾಗಲೇ ಆಸ್ಪತ್ರೆಯಲ್ಲಿ 19 ಬೆಡ್‌ಗಳಿಗೆ ಆಕ್ಸಿಜನ್ ವ್ಯವಸ್ಥೆ ಇದೆ. 11 ಜಂಬೋ ಸಿಲಿಂಡರ್‌ಗಳು, 26 ಸಣ್ಣ ಸಿಲಿಂಡರ್‌ಗಳು ಹಾಗೂ 15 ಔಟ್‌ಲೆಟ್‌ಗಳು ಬೇಕಾಗುತ್ತದೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಆಸ್ಪತ್ರೆಗೆ 100 ಜಂಬೋ ಸಿಲಿಂಡರ್ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ವಹಿಸಲಾಗುವುದು. ಆಸ್ಪತ್ರೆಗೆ (3ನೇ ಪುಟಕ್ಕೆ)

## ಎಸ್‌ಎಸ್ ಆಸ್ಪತ್ರೆಗೆ ಡಿಸಿ ಅನಿರೀಕ್ಷಿತ ಭೇಟಿ



ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಇಎಸ್‌ಐ ಆಸ್ಪತ್ರೆಯಲ್ಲಿ ಪರಿಶೀಲನೆ ನಡೆಸಿದ ಬಳಿಕ ಅನಿರೀಕ್ಷಿತವಾಗಿ ಎಸ್.ಎಸ್.ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ನಂತರ ಆಸ್ಪತ್ರೆಯ ಎಂಐಸಿಯು, ಐಸೋಲೇಷನ್ ಹಾಗೂ ಐಸಿಯು ವಾರ್ಡ್‌ಗಳಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಕುರಿತು ವೈದ್ಯರ ಬಳಿ ಮಾಹಿತಿ ಪಡೆದುಕೊಂಡರು.

ಎಸ್.ಎಸ್.ಆಸ್ಪತ್ರೆಯು ಕೋವಿಡ್ ಸೋಂಕಿತ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದು, ಹೆಚ್ಚು ಸೋಂಕಿತರು ಗುಣಮುಖರಾಗುತ್ತಿದ್ದಾರೆ. ಗುಣಮುಖರಾದ ರೋಗಿಗಳನ್ನು ಆದಷ್ಟು ಬೇಗ ಬಿಡುಗೊಡೆಗೊಳಿಸಿ, ಅಗತ್ಯವಿರುವ ಅಥವಾ ತುರ್ತು ಇರುವ (3ನೇ ಪುಟಕ್ಕೆ)

# ಆಸ್ಪತ್ರೆಗಳಲ್ಲಿ ಆಮ್ಲಜನಕ, ಆಂಬ್ಯುಲೆನ್ಸ್, ವೆಂಟಿಲೇಟರ್ ಹಾಸಿಗೆ, ಲಸಿಕೆ ಲಭ್ಯ

## ರಾಣೇಬೆನ್ನೂರಿನ ಶಾಸಕ ಅರುಣ್‌ಕುಮಾರ್ ಪೂಜಾರ್



### ಕೋವಿಡ್ ಒಗ್ಗಟ್ಟು...

ಅನೇಕ ತಿಂಗಳುಗಳಿಂದ ಶಾಸಕ ಅರುಣ ಕುಮಾರ ಪೂಜಾರ ಅವರಿಂದ ಅಂತರ ಕಾಯ್ದು ಕೊಂಡಿದ್ದ ಎಂಎಲ್‌ಎ ಟಿಕೆಟ್ ವಂಚಿತರಾದ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿಶ್ವನಾಥ ಪಾಟೀಲ, ವಕೀಲ ಪರಿ ಷತ್ತಿನ ಮಾಜಿ ನಿರ್ದೇಶಕ ಕೆ. ಶಿವಲಿಂಗಪ್ಪ ಸೇರಿದಂತೆ ಅನೇಕ ಮುಖಂಡರು ಇಂದು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು. ಇದು ಕೇವಲ ಕೋವಿಡ್ ಓಡಿಸುವ ಒಗ್ಗಟ್ಟು ಪ್ರದರ್ಶನವೆನ್ನುವ ಮಾತುಗಳು ಕೇಳಿ ಬಂದವು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಜಿ. ಪಂ. ಮಾಜಿ ಉಪಾಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣನವರ ಗೈರು ಹಾಜರಾಗಿದ್ದರು.

ರಾಣೇಬೆನ್ನೂರು, ಮೇ 5- ಕಳೆದ ಮಾರ್ಚ್‌ನಲ್ಲಿ ಕಾಣಿಸಿಕೊಂಡ ಕೋವಿಡ್ ಸೋಂಕು, ಪ್ರಾರಂಭದ ಒಂದೆರಡು ತಿಂಗಳು ಹಸಿರು ಪಟ್ಟಿಯಲ್ಲಿದ್ದ ರಾಣೇಬೆನ್ನೂರನ್ನು ಈಗ ಜಿಲ್ಲೆಯಲ್ಲಿಯೇ ಹೆಚ್ಚು ಸೋಂಕಿನ ತಾಲ್ಲೂಕನ್ನಾಗಿಸಿದ್ದು, ಕೊರೊನಾ ಹೊಡೆದೋಡಿಸಲು ಅವಶ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ದೇವರಗುಡ್ಡದ ಅರ್ಚಕ ಸಂತೋಷ ಭಟ್ ಅವರಿಂದ ಎರವಲು ಪಡೆದ ಅಂಬ್ಯುಲೆನ್ಸ್ ಅನ್ನು ಆರೋಗ್ಯ ಇಲಾಖೆಯ ಸುಪರ್ದಿಗೆ ನೀಡಿ ಮಾಧ್ಯಮ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆಸ್ಪತ್ರೆಗಳಲ್ಲಿ ಆಮ್ಲಜನಕ, ಆಂಬ್ಯುಲೆನ್ಸ್, ವೆಂಟಿಲೇಟರ್ ಹಾಸಿಗೆ ಹಾಗೂ ಲಸಿಕೆ ಎಲ್ಲ ಸೌಲಭ್ಯಗಳು ಲಭ್ಯವಿವೆ. ತಾಲ್ಲೂಕು ಪಂಚಾಯ್ತಿಯ ತಮ್ಮ ಕಛೇರಿಯಲ್ಲಿ ಸಹಾಯವಾಣಿ ತೆರೆಯಲಾಗಿದೆ. ಸಾರ್ವಜನಿಕರು ರಾಣೇಬೆನ್ನೂರು ಕೋಡ್ ನೊಂದಿಗೆ 261313 ದೂರವಾಣಿ ಕರೆ ಮಾಡಬಹುದು. ಈ ವ್ಯವಸ್ಥೆ 24×7 ಸಿಗಲಿದೆ ಎಂದು ಶಾಸಕರು ವಿವರಿಸಿದರು.

ನಗರದ ಓಂ ಆಸ್ಪತ್ರೆಯಲ್ಲೂ ಕೋವಿಡ್ ಸೋಂಕಿತ ರಿಗೆ ಚಿಕಿತ್ಸೆ ದೊರೆಯುತ್ತಿದ್ದು, ಇನ್ನೊಂದು ಅಂಬ್ಯುಲೆನ್ಸ್ ತರುವ ಪ್ರಯತ್ನ ನಡೆದಿದೆ. ಕ್ಷೇತ್ರದ ಜನರಿಗೆ ತೊಂದರೆ ಆಗದಂತೆ ವ್ಯವಸ್ಥೆ ಮಾಡ ಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ ಅವರು ಜನರ ಆರೋಗ್ಯ ಕಾಪಾಡಲು ಸೂಕ್ತ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು.

ದೇವರಗುಡ್ಡ ಹಾಗೂ ಸುತ್ತಲಿನ ಜನರ ಉಪಯೋಗಕ್ಕಾಗಿ ತರಲಾಗಿದ್ದ ಅಂಬ್ಯುಲೆನ್ಸ್ ಅನ್ನು ತಾಲ್ಲೂಕಿನ ಹೆಚ್ಚಿನ ಜನರಿಗೆ ಉಪಯೋಗವಾಗಲಿ ಎಂದು ಶಾಸಕರಿಗೆ ನೀಡಲಾಗಿದೆ ಎಂದು ದೇವರಗುಡ್ಡ ಮಾಲತೇಶ ದೇವಸ್ಥಾನದ ಅರ್ಚಕ ಸಂತೋಷಭಟ್ ಹೇಳಿದರು.

ಮಹಾಮಾರಿ ಕೊರೊನಾ ಸೋಂಕು ಕೊನೆಯಾಗಲಿ ಎಂದು ಶೀಘ್ರದಲ್ಲೇ ಧನ್ವಂತರಿ ಯಾಗ ಮಾಡುವುದಾಗಿ ಹಾಗೂ ಲಾಕ್‌ಡೌನ್ ಮುಂದುವರೆದಲ್ಲಿ ಬಡವರಿಗೆ ದಿನಸಿ ಕಿಟ್ ಕೊಡುವ ಬಗ್ಗೆ ಅವರು ಪ್ರಸ್ತಾಪಿಸಿದರು.

ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಕಸ್ತೂರಿ ಹಿರೇಬಿದರಿ, ಸದಸ್ಯರಾದ ಪ್ರಕಾಶ ಪೂಜಾರ, ಗಂಗಮ್ಮ ಹಾವನೂರ, ಮಂಜುಳಾ ಹತ್ತಿ, ಸಾರಿಗೆ ಸಂಸ್ಥೆ ನಿರ್ದೇಶಕ ಸಂತೋಷ್ ಪಾಟೀಲ ಹಾಗೂ ಅನೇಕ ಬಿಜೆಪಿ ಮುಖಂಡರು ಶಾಸಕರ ಜೊತೆಗಿದ್ದರು.

# ಖಾಸಗಿ ನರ್ಸಿಂಗ್ ಹೋಂಗಳಿಗೆ ಅಧಿಕಾರಿಗಳ ತಂಡದ ಭೇಟಿ : ಪರಿಶೀಲನೆ



ಹರಿಹರ, ಮೇ 5- ನಗರದ ಖಾಸಗಿ ನರ್ಸಿಂಗ್ ಹೋಂಗಳು ಸಾರ್ವಜನಿಕರಿಗೆ ಯಾವ ರೀತಿಯಲ್ಲಿ ಸೇವೆಯನ್ನು ಒದಗಿಸುತ್ತಿವೆ ಎಂಬುದರ ಮಾಹಿತಿ ಪಡೆಯಲು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್ ತಂಡವು ನಗರದ ಖಾಸಗಿ ನರ್ಸಿಂಗ್ ಹೋಂಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರೋಗಿಗಳಿಗೆ ಇರುವ ಚಿಕಿತ್ಸಾ ಸೌಲಭ್ಯಗಳು, ಬೆಡ್, ಆಕ್ಸಿಜನ್ ವ್ಯವಸ್ಥೆ ಯಾವ ರೀತಿ ಮಾಡಲಾಗಿದೆ, ಚಿಕಿತ್ಸಾ ದರಗಳ ಫಲಕವನ್ನು ಹಾಕಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ಈ ವೇಳೆ ಮಾತನಾಡಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ನಗರದಲ್ಲಿ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಪ್ರಮುಖವಾಗಿ ಶುಭೋದಯ ಆಸ್ಪತ್ರೆಯಲ್ಲಿ ಒಂಬತ್ತು ಬೆಡ್, ಎರಡು ಆಕ್ಸಿಜನ್, ಅಕ್ಷಯದಲ್ಲಿ 30 ಬೆಡ್, ನಾಲ್ಕು ಆಕ್ಸಿಜನ್, ಶ್ರೇಯದಲ್ಲಿ 30 ಬೆಡ್, ನಾಲ್ಕು ಆಕ್ಸಿಜನ್ ವ್ಯವಸ್ಥೆ ಇದ್ದು, ಇಲ್ಲಿ ಯಾವುದೇ ತೊಂದರೆ ಕಂಡುಬಂದಿಲ್ಲ. ಮುಂದೆಯೂ ಯಾವುದೇ ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿರುವುದಾಗಿ ಹೇಳಿದರು.

**ಹರಿಹರ**

ಡಾ. ಚಂದ್ರಮೋಹನ್ ಮಾತನಾಡಿ, ಖಾಸಗಿ ನರ್ಸಿಂಗ್ ಹೋಂಗಳು ಸಾರ್ವಜನಿಕರಿಂದ ಹೆಚ್ಚಿನ ಹಣ ಪಡೆಯದೇ, ಚಿಕಿತ್ಸೆ ಕೊಡಬೇಕು. ಯಾವ ಚಿಕಿತ್ಸೆಗೆ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ಎಂಬುದರ ಬಗ್ಗೆ ಆಸ್ಪತ್ರೆಯ ಆವರಣದಲ್ಲಿ ಫಲಕವನ್ನು ಕಡ್ಡಾಯವಾಗಿ ಹಾಕಬೇಕು ಎಂದು ಸೂಚಿಸಿದರು.

ಸಿಪಿಐ ಸತೀಶ್ ಕುಮಾರ್ ಮಾತನಾಡಿ, ಆಸ್ಪತ್ರೆಯ ಆವರಣದಲ್ಲಿ ಮೊದಲು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಗುಣಮಟ್ಟದ ಔಷಧಿಗಳನ್ನು ನೀಡಬೇಕು. ಅತಿಯಾಗಿ ಹೆಚ್ಚಿನ ದರವನ್ನು ಮಾಡಿ ಸಾರ್ವಜನಿಕರಿಂದ ಹೆಚ್ಚಿನ ಹಣ ಪಡೆಯದೇ ಸಾಮಾಜಿಕ ಕಳಕಳಿಯಿಂದ ವೈದ್ಯಕೀಯ ಸೇವೆ ಒದಗಿಸುವಂತೆ ಹೇಳಿದರು.

ಶುಭೋದಯ ಆಸ್ಪತ್ರೆಯ ಡಾ. ಸವಿತಾ ಮಾತನಾಡಿ, ನಮ್ಮಲ್ಲಿ ಹೆಚ್ಚಾಗಿ ಗರ್ಭಿಣಿ ಮಹಿಳೆಯರು ಚಿಕಿತ್ಸೆ ಪಡೆಯಲು ಬರುತ್ತಾರೆ. ಅವರಿಗೆ ಮೊದಲು ಕೊರೊನಾ ಟೆಸ್ಟ್ ಮಾಡಿ ನಂತರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ರೋಗಿಗಳಿಗೆ ಗುಣಮಟ್ಟದ ಸೌಲಭ್ಯಗಳನ್ನು ನೀಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಕಿರಣ್, ಮುರುಳಿಧರ್, ನಾಗರಾಜ್ ಹಾಗು ಇನ್ನಿತರರು ಹಾಜರಿದ್ದರು.

## ಮಲೇಬೆನ್ನೂರಿನಲ್ಲಿ ಇಂದು ತುರ್ತು ಸೇವಾ ವಾಹನ ಸಮರ್ಪಣೆ

ಹರಿಹರ ತಾಲ್ಲೂಕಿನ ಬಿಜೆಪಿ ಮುಖಂಡ ಹಾಗೂ ಪಂಚಮಸಾಲಿ ಗುರುಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಅವರು ಇಂದು ತಮ್ಮ ಹುಟ್ಟುಹಬ್ಬದ ಅಂಗವಾಗಿ ಹರಿಹರ ತಾಲ್ಲೂಕಿನ ಜನತೆಗೆ ತುರ್ತು ಸೇವಾ ವಾಹನವನ್ನು ಸಮರ್ಪಣೆ ಮಾಡಲಿದ್ದಾರೆ. ಅಲ್ಲದೇ, ತಾಲ್ಲೂಕಿನ ಪ್ರತಿ ಗ್ರಾ.ಪಂಗೆ ಭೇಟಿ ನೀಡಿ, ಕೊರೊನಾ ವಾರಿಯರ್ಸ್‌ಗಳಿಗೆ ಸ್ಯಾನಿಟೈಜ್, ಮಾಸ್ಕ್ ವಿತರಣೆ ಹಾಗೂ ಕೋವಿಡ್ ಅರಿವು ಕಾರ್ಯಕ್ರಮವನ್ನು ಅವರ ಅಭಿಮಾನಿ ಬಳಗ ಹಮ್ಮಿಕೊಂಡಿದೆ.

## ಜಿಲ್ಲೆಯಲ್ಲಿ ದಾಖಲೆಯ ಸೋಂಕಿತರು

**(1ನೇ ಪುಟದಿಂದ)** ಈ ಹಿಂದೆ 2020ರ ಅಕ್ಟೋಬರ್ 9ರಂದು ಒಂದೇ ದಿನ 450 ಸೋಂಕಿತರು ಕಂಡು ಬಂದಿದ್ದು, ಹಿಂದಿನ ದಾಖಲೆಯಾಗಿತ್ತು. ಏಪ್ರಿಲ್‌ನಲ್ಲಿ ಕೊರೊನಾ ಎರಡನೇ ಅಲೆ ಆರಂಭವಾದ ಒಂದೇ ತಿಂಗಳಲ್ಲೇ ಸೋಂಕಿತರು ಪತ್ತೆಯಾಗುವ ಸಂಖ್ಯೆ ಕಳವಳಕಾರಿಯಾಗಿ ಏರಿಕೆಯಾಗಿದೆ.

ಆರ್.ಟಿ. - ಪಿ.ಸಿ.ಆರ್. ಪರೀಕ್ಷೆಯಲ್ಲಿ 470 ಸೋಂಕಿತರು ಹಾಗೂ ಆರ್.ಎ.ಟಿ. ಪರೀಕ್ಷೆಯಲ್ಲಿ 78 ಸೋಂಕಿತರು ಪತ್ತೆಯಾಗಿದ್ದಾರೆ. ಇದೇ ದಿನ 212 ಸೋಂಕಿತರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,534ಕ್ಕೆ ತಲುಪಿದೆ.

ದಾವಣಗೆರೆ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ 337 ಸೋಂಕಿತರು ಪತ್ತೆಯಾಗಿದ್ದಾರೆ. ಹರಿಹರದಲ್ಲಿ 56, ಜಗಳೂರಿನಲ್ಲಿ 31, ಚನ್ನಗಿರಿಯಲ್ಲಿ 72, ಹೊನ್ನಾಳಿಯಲ್ಲಿ 39 ಹಾಗೂ ಇತರೆ ಜಿಲ್ಲೆಗಳ 13 ಸೋಂಕಿತರು ಪತ್ತೆಯಾಗಿದ್ದಾರೆ. ಕೊರೊನಾ ಸೋಂಕಿನಿಂದಾಗಿ ಹರಿಹರದ ವಿಜಯನಗರದ 35 ವರ್ಷದ ವ್ಯಕ್ತಿ ಹಾಗೂ ಕುರುಬರ ಬೀದಿಯ 70 ವರ್ಷದ ಹಿರಿಯರು ಸಾವನ್ನಪ್ಪಿದ್ದಾರೆ.

## ಕೋವ್ಯಾಕ್ಸಿನ್ ಮೊದಲ ಡೋಸ್‌ಗೆ ತಡೆ

**(1ನೇ ಪುಟದಿಂದ)** ಅಧಿಕಾರಿಯಾಗಿರುವ ಡಾ. ಕೆ.ಎಸ್. ಮೀನಾಕ್ಷಿ ತಿಳಿಸಿದ್ದಾರೆ. ಪ್ರಸಕ್ತ ರಾಜ್ಯ ಸರ್ಕಾರದಿಂದ ಕೋವಿಶೀಲ್ಡ್ ಲಸಿಕೆಗಳು ಮಾತ್ರ ಬಂದಿವೆ. ಕೋವ್ಯಾಕ್ಸಿನ್ ಲಸಿಕೆ ಇನ್ನೊಂದೆರಡು ದಿನಗಳಲ್ಲಿ ಬರುವ ನಿರೀಕ್ಷೆ ಇದೆ. ಸ್ವಲ್ಪ ಪ್ರಮಾಣದ ಲಸಿಕೆ ಬರುವ ಸಾಧ್ಯತೆ ಇದ್ದು, ಇದನ್ನು ಎರಡನೇ ಡೋಸ್‌ನವರಿಗೆ ನೀಡಲಾಗುವುದು. ಮೊದಲ ಡೋಸ್ ಆಗಿ ಕೋವ್ಯಾಕ್ಸಿನ್ ಸದ್ಯಕ್ಕೆ ನೀಡುವುದಿಲ್ಲ ಎಂದವರು ಹೇಳಿದ್ದಾರೆ.

## ಹರಿಹರ : ಅಪಾರ ಪ್ರಮಾಣದ ಮಳೆ

ಹರಿಹರ, ಮೇ 5- ನಗರದಲ್ಲಿ ಮತ್ತು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ರಾತ್ರಿ ವೇಳೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಆಲಿಕಲ್ಲು ಸಹಿತ ಮಳೆ ಬಿದ್ದಿದೆ. ಆದರೆ, ಯಾವುದೇ ರೀತಿಯ ಹಾನಿ ಮತ್ತು ಸಾವು - ನೋವುಗಳ ಬಗ್ಗೆ ನಿಖರವಾದ ಮಾಹಿತಿ ದೊರೆತಿರುವುದಿಲ್ಲ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

ತಾಲ್ಲೂಕಿನ ಹರಗನಹಳ್ಳಿ, ಬನ್ನಿಕೋಡು, ಹನಗವಾಡಿ, ಗುತ್ತೂರು, ಸಾರಥಿ, ಬಿಳಸನೂರು, ಗಂಗನಹರಸಿ, ದೀಟೂರು, ಕೊಂಡಜ್ಜಿ, ಸಂಕ್ಲೀಪುರ, ಬೆಳ್ಳೂಡಿ, ಪಾಮೇನಹಳ್ಳಿ, ಕುರುಬರಹಳ್ಳಿ, ಭಾನುವಳ್ಳಿ, ರಾಮತೀರ್ಥ, ನಾಗೇನಹಳ್ಳಿ ಸೇರಿದಂತೆ ನಗರ ಪ್ರದೇಶದಲ್ಲಿ ಸುಮಾರು ಗಂಟೆಯವರೆಗೆ ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಿದ್ದಿರುವ ಬಗ್ಗೆ ಮಾಹಿತಿ ಬಂದಿದ್ದು, ರೈತರ ಬೆಳೆ ಹಾನಿ ಮತ್ತು ಮನೆಗಳಿಗೆ ಯಾವ ಪ್ರಮಾಣದಲ್ಲಿ ಹಾನಿ ಸಂಭವಿಸಿದೆ ಎಂಬುದು ಬೆಳಿಗ್ಗೆ ಸ್ಥಳ ಪರಿಶೀಲನೆ ನಡೆಸಿ, ನಂತರದಲ್ಲಿ ಮಾಹಿತಿ ಒದಗಿಸಲಾಗುತ್ತದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ಧೀರೇಂದ್ರ ಗೋಪಾಲ್ ಪತ್ನಿ ನಿಧನ



ಹರಿಹರ, ಮೇ 5- ಹೆಸರಾಂತ ಚಲನಚಿತ್ರ ನಟರಾಗಿದ್ದ ದಿ. ಧೀರೇಂದ್ರ ಗೋಪಾಲ್ ಅವರ ಧರ್ಮಪತ್ನಿ ಸುನಂದಮ್ಮ ಅವರು ಇಂದು ಬೆಳಗ್ಗೆ 11.30 ಕ್ಕೆ ಹರಿಹರದಲ್ಲಿ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ಸಂಜೆ ನಡೆಯಿತು.

## ಕೂಡ್ಲಿಗಿ ಬಳಿ ರಸ್ತೆ ಅಪಘಾತ : ಸಾವು

ಕೂಡ್ಲಿಗಿ, ಮೇ 5- ಬೈಕ್ ಸವಾರನ ನಿಯಂತ್ರಣ ತಪ್ಪಿ ಬೈಕ್ ರಸ್ತೆ ಪಕ್ಕದ ಡಿವೈಡರ್‌ಗೆ ಡಿಕ್ಕಿ ಹೊಡೆದು ನಂತರ ಸರ್ವೀಸ್ ರಸ್ತೆಗೆ ಉರುಳಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವಿಗೀಡಾಗಿದ್ದು, ಹಿಂಬದಿ ಸವಾರನಿಗೆ ಗಂಭೀರ ಗಾಯಗಳಾಗಿರುವ ಘಟನೆ ತಾಲ್ಲೂಕಿನ ಅಮಲಾಪುರ ಬಳಿ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಬುಧವಾರ ನಸುಕಿನ ಜಾವ ನಡೆದಿದೆ.

ದಾಸೋಬನಹಳ್ಳಿಯ ಚನ್ನಬಸಪ್ಪ (28) ಸ್ಥಳದಲ್ಲಿಯೇ ಸಾವನ್ನಪ್ಪಿದ್ದು ಹಿಂಬದಿ ಕುಳಿತಿದ್ದ ಎಂ.ಬಿ. ಅಯ್ಯನಹಳ್ಳಿ ಗ್ರಾಮದ ನಾಗರಾಜ (25) ಎನ್ನುವ ಯುವಕನಿಗೆ ಗಂಭೀರ ಗಾಯಗಳಾಗಿದ್ದು, ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಸ್ಥಳಕ್ಕೆ ತಾಲ್ಲೂಕಿನ ಹೊಸಹಳ್ಳಿ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ನಾಗರತ್ನ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದರು.

## ಲಾಕ್‌ಡೌನ್ ವಿರುದ್ಧ ರೈತರ ಪ್ರತಿಭಟನೆ

ನವದೆಹಲಿ, ಮೇ 5 – ಪಂಜಾಬ್ ಸರ್ಕಾರ ಹೇರಿರುವ ಲಾಕ್‌ಡೌನ್ ವಿರುದ್ಧ ಮೇ 8ರಂದು ಪ್ರತಿಭಟನೆ ನಡೆಸುವುದಾಗಿ ಹೇಳಿರುವ ರೈತ ಸಂಘಟನೆಗಳು, ಅಂದು ಜನರು ಲಾಕ್‌ಡೌನ್ ಉಲ್ಲಂಘಿಸಬೇಕೆಂದು ಕರೆ ನೀಡಿವೆ.

ದೆಹಲಿಯಲ್ಲಿ ರೈತರು ಹಲವಾರು ತಿಂಗಳು ಗಳಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯನ್ನು ಬಲಗೊಳಿ ಸಲೂ ಸಹ ರೈತ ಸಂಘಟನೆಗಳು ನಿರ್ಧರಿಸಿವೆ.

ಪ್ರತಿಭಟನಾ ಸ್ಥಳವಾದ ದೆಹಲಿಯ ಸಿಂಘು ವಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದ ರೈತ ಮುಖಂಡ ಬಲಬೀರ್ ಸಿಂಗ್ ರಾಜೆವಲ್, ಕೊರೊನಾ ಪರಿಸ್ಥಿತಿ ನಿಭಾಯಿಸುವ ವೈಫಲ್ಯ ಮುಚ್ಚಿಟ್ಟುಕೊಳ್ಳಲು ಸರ್ಕಾರ ಲಾಕ್‌ಡೌನ್ ಹೇರುತ್ತಿದೆ. ಸರ್ಕಾರ ರೈತರ ಹೋರಾಟ ದುರ್ಬಲಗೊಳಿಸಲು ಬಯಸುತ್ತಿದೆ ಎಂದು ಆರೋಪಿಸಿದ್ದಾರೆ.

ಪ್ರತಿಭಟನಾ ನಿರತ ರೈತ ಸಂಘಟನೆಗಳ ಒಕ್ಕೂಟ ವಾದ ಸಂಯುಕ್ತ ಕಿಸಾನ್ ಮೋರ್ಚಾ ಪರವಾಗಿ ಮಾತನಾಡುತ್ತಿದ್ದ ಅವರು, ಪಂಜಾಬ್‌ನ 32 ರೈತ ಸಂಘಟನೆಗಳು ಲಾಕ್‌ಡೌನ್ ವಿರುದ್ಧ ಪಂಜಾಬ್‌ನಲ್ಲಿ ಮೇ 8 ರಂದು ಪ್ರತಿಭಟನೆ ನಡೆಸಲಿವೆ. ನಮ್ಮ ಕಾರ್ಯ ಕರ್ತರು ಅಂದು ಬೀದಿಗೆ ಬರಲಿದ್ದಾರೆ. ಜನರು ತಮ್ಮ ಅಂಗಡಿಗಳನ್ನು ತೆರೆಯಬೇಕು ಹಾಗೂ ಲಾಕ್‌ಡೌನ್‌ಗೆ ಅವಕಾಶ ನೀಡಬಾರದು ಎಂದವರು ಕರೆ ನೀಡಿದ್ದಾರೆ. ಪಂಜಾಬ್‌ನಲ್ಲಿ ಮೇ 15ರವರೆಗೆ ವಾರಾಂತ್ಯದ ಲಾಕ್‌ಡೌನ್ ಹಾಗೂ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ.

ಈ ನಡುವೆ, ಸಾವಿರಾರು ರೈತರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟ ದಲ್ಲಿ ಪಾಲ್ಗೊಳ್ಳಲು ಅಮೃತ್‌ಸರದಿಂದ ತೆರಳಿದ್ದಾರೆ.

## ಬಾಲ್ಯ ವಿವಾಹ ತಡೆದು ಅಪ್ರಾಪ್ತೆಯ ರಕ್ಷಣೆ

ದಾವಣಗೆರೆ, ಮೇ 5 - ಬಾಲ್ಯ ವಿವಾಹವನ್ನು ತಡೆದು ಬಾಲಕಿಯನ್ನು ರಕ್ಷಿಸಿದ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಮತ್ತು ವಿವಿಧ ಇಲಾಖೆ ಅಧಿಕಾರಿಗಳ ತಂಡವು ಆಕೆಯನ್ನು ನಗರದ ಬಾಲಮಂದಿರಕ್ಕೆ ದಾಖಲಿಸಿದೆ.

ತಾಲ್ಲೂಕಿನ ಆನಗೋಡು ಗ್ರಾಮದ 28 ವರ್ಷದ ಯುವಕನಿಗೆ ವರನ ಸ್ವಗೃಹದಲ್ಲೇ ತಾಲ್ಲೂಕಿನ 17 ವರ್ಷ 9 ತಿಂಗಳ ಅಪ್ರಾಪ್ತೆಯ ವಿವಾಹವನ್ನು ಇಂದು ನಡೆಸಲು ನಿಗದಿಪಡಿಸಲಾಗಿತ್ತು. ಮಕ್ಕಳ ಸಹಾಯವಾಣಿ 1098ಕ್ಕೆ ಬಂದ ದೂರಿನ ಹಿನ್ನೆಲೆಯಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋದ ಸಂಯೋಜಕ ಟಿ.ಎಂ. ಕೊಟ್ರೇಶ, ಗ್ರಾಪಂ ಕಾರ್ಯದರ್ಶಿ ಜೆ.ಸಿ.ಸುರೇಶ್, ಗ್ರಾಮ ಲೆಕ್ಕಾಧಿಕಾರಿ ಸೆಬಾಸ್ಟಿನ್, ಶಿಶು ಅಭಿವೃದ್ಧಿ ಯೋಜನೆ ಹಿರಿಯ ಮೇಲ್ವಿಚಾರಕಿ ಮೈತ್ರಾದೇವಿ, ಗ್ರಾಮಾಂತರ ಠಾಣೆ ಹೆಡ್ ಕಾನ್‌ಸ್ಟೇಬಲ್ ಎಸ್. ಪ್ರಕಾಶ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಮತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಾರುತಿ ಅವರನ್ನು ಒಳಗೊಂಡ ತಂಡ ಬಾಲ್ಯವಿವಾಹ ತಡೆದಿದೆ.

ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮ ಹಾಗೂ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಿ, ಬಾಲಕಿಯನ್ನು ವಶಕ್ಕೆ ಪಡೆದು, ಸೂಕ್ತ ಪೋಷಣೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಅಪ್ರಾಪ್ತೆಯನ್ನು ಹಾಜರುಪಡಿಸಲು ಇಲ್ಲಿನ ಶ್ರೀರಾಮ ನಗರದ ಸರ್ಕಾರಿ ಬಾಲಕಿಯರ ಬಾಲ ಮಂದಿರಕ್ಕೆ ದಾಖಲಿಸಿ, ಬಾಲ್ಯ ವಿವಾಹವನ್ನು ನಿಲ್ಲಿಸಿದ್ದಾರೆ.

ಗ್ರಾ.ಪಂ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿಗಳು ರಚನೆಯಾಗಬೇಕು. ಅವುಗಳ ಕಾರ್ಯ ಯೋಜನೆ ಮತ್ತು ಚಟುವಟಿಕೆಗಳು ದಾಖಲೆ, ವರದಿಗಳಿಗಷ್ಟೇ ಸೀಮಿತವಾಗದೇ, ಸಮುದಾಯದಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ಕ್ರಿಯಾಶೀಲವಾದಾಗ ಮಾತ್ರ ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಿ, ಬಾಲ್ಯ ವಿವಾಹದಂತಹ ಅನಿಷ್ಟಗಳಿಂದ ಪಾರಾಗಲು ಸಾಧ್ಯವೆಂದು ಸಂಯೋಜಕ ಟಿ.ಎಂ. ಕೊಟ್ರೇಶ್ ತಿಳಿಸಿದ್ದಾರೆ.

## ಆಸ್ತಿ ತೆರಿಗೆ ವಿನಾಯಿತಿ ವಿಸ್ತರಣೆ

**(1ನೇ ಪುಟದಿಂದ)** ಸಾಲಿನ ಆಸ್ತಿ ತೆರಿಗೆಯ ಪಾವತಿಗೆ ನೀಡಲಾಗುತ್ತಿರುವ ಶೇ.5 ರಷ್ಟು ರಿಯಾಯಿತಿ ಅವಧಿಯನ್ನು ವಿಸ್ತರಿಸಲು ಜನಪ್ರತಿನಿಧಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಮನವಿ ಮಾಡಿಕೊಂಡಿದ್ದವು.

ಸಾರ್ವಜನಿಕರು ಸಾಮಾಜಿಕ ಅಂತರ ಮತ್ತು ಪ್ರತ್ಯೇಕತೆಗೆ ಹೆಚ್ಚಿನ ಗಮನ ಹರಿಸುವ ದೃಷ್ಟಿಯಿಂದ 2020-21 ನೇ ಸಾಲಿನ ಆಸ್ತಿ ತೆರಿಗೆ ಪಾವತಿಗೆ ನೀಡಲಾಗುವ ಶೇ.5 ರಷ್ಟು ರಿಯಾಯತಿ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಗಳು ಮಾರಾಟಕ್ಕಿವೆ**
ಸರಸ್ವತಿ ಬಡಾವಣೆ ಪಶ್ಚಿಮ 20×30 ಮೇಲೆ ಕೆಳಗೆ ಮನೆ, ಪಶ್ಚಿಮ 30×40, ಎಸ್.ಎಸ್. ಹೈಟೆಕ್ ಪಶ್ಚಿಮ 30×50, ಆಂಜನೇಯ ಬಡಾವಣೆ ಉತ್ತರ 30×45 ಕೆಳಗೆ ಮನೆ ಮೇಲೆ ಹತ್ತು ರೂಮ್‌ಗಳು (ಪಿ.ಜಿ.ಗೆ ಉತ್ತಮ ಸ್ಥಳ) ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಹಾಗೂ ಕೊಡುವುದಕ್ಕೆ ಸಂಪರ್ಕಿಸಿ :
ಐಗೂರು ವಿಜಯಕುಮಾರ್, 9945702495
ಸುರೇಶ್ : 9591160520

**ಪಾರ್ಟ್ ಟೈಂ ಕೆಲಸ**
SBI Life Insurance ನಲ್ಲಿ Insurence Agent ಆಗಿ ಪಾರ್ಟ್ ಟೈಂ ಕೆಲಸ ಮಾಡಿ ತಿಂಗಳಿಗೆ 30,000/- ಸಂಪಾದಿಸುವ ಅವಕಾಶ, 30 ವರ್ಷ ಮೇಲ್ಪಟ್ಟವರು SSLC ಪಾಸಾದವರು ಕರೆ ಮಾಡಿ
99009 19091

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಷಾ ವೇಲ್ ಚಂದ್ ದೋಲಾಜಿ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ, ಪೂರ್ವ-ಪಶ್ಚಿಮ 30×40 ಮತ್ತು ಪೂರ್ವ 30×50 ಮತ್ತು 40×60, ಗ್ಲಾಸ್ ಹೌಸ್ ಹಿಂಭಾಗ ಪೂರ್ವ 65×150 ಸೈಟುಗಳಿಗೆ ಸಂಪರ್ಕಿಸಿ :
ಐಗೂರು ವಿಜಯಕುಮಾರ್, 9945702495
ಸುರೇಶ್ : 9591160520

**ಲಿಂಗಾಯತ (ಜಂಗಮ) ವಧು-ವರ**
ಲಿಂಗಾಯತ, ಜಂಗಮ ಇಂಜಿನಿಯರ್, ಡಾಕ್ಟರ್, ಲೆಕ್ಚರರ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ, ಉತ್ತಮ ವಧು-ವರರಿಗಾಗಿ ಸಂಪರ್ಕಿಸಿರಿ
ಮೊ: 98807 29108

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಗ್ಲಾಸ್ ಹೌಸ್ ಹತ್ತಿರ, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಪಶ್ಚಿಮ: 30x50, ದಕ್ಷಿಣಕ್ಕೆ : 40x40 ಅಳತೆಯುಳ್ಳ ಸೈಟುಗಳು ಮಾರಾಟಕ್ಕಿವೆ.
90198 88512, 96111 50888

**ಮಾರಾಟಕ್ಕೆ ಇವೆ**
ಉಪಯೋಗಿಸಿರುವ ಸಾರವಿ ಪೋಲ್ಸ್ ಮಾರಾಟಕ್ಕಿವೆ. ಸಂಪರ್ಕಿಸಿರಿ :
99028 78035

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಲಿಂಗಾಯಿತ ಅಡುಗೆಯವರು ಬೇಕಾಗಿದ್ದಾರೆ**
ಮನೆಯಲ್ಲಿ ರುಚಿಕಟ್ಟಾಗಿ ಅಡುಗೆ ಮಾಡಲು ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಮೊ. : 94480 55555

**ಮಾರಾಟಕ್ಕೆ ಇವೆ**
ಹಳೆಯ ಚಪ್ಪಟಿ ಕಲ್ಲುಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
99028 78035

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
SWAPNA CUSHION WORK
Behind Vittal Temple, Maharaj Pet, Davanagere.
98445 81966

Stay Home, Stay safe
**ALL SPORTZ ITEMS AVAILABLE**
FIXED RATE, At your steps : delivery charges extra. Cash on delivery. to order your requirements
964953137; dail 8310154195


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 5.5.2021ರಂದು ಹರಿಹರ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರೂ, ನಮ್ಮ ಸಂಘದ ನಿರ್ದೇಶಕರೂ ಆದ **ಜಿಗಳಿ ಗ್ರಾಮದ ಶ್ರೀ ಕೆ.ಜಿ. ರಾಜಕುಮಾರ್** (52 ವರ್ಷ) ಅವರು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿ ಮತ್ತು ಸಿಇಓ ಹಾಗೂ ಸಿಬ್ಬಂದಿ ವರ್ಗ
**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,**
ಜಿಗಳಿ, ಹರಿಹರ ತಾಲ್ಲೂಕು.

## ಶ್ರೀಮತಿ ಪಾರ್ವತಮ್ಮ ನಿಧನ




ಡಿಆರ್‌ಎಂ ಕಾಲೇಜಿನ ನೌಕರರಾದ ಲೇಟ್ ಎನ್. ವೀರಭದ್ರಪ್ಪನವರ ಧರ್ಮಪತ್ನಿ **ಶ್ರೀಮತಿ ಎನ್.ವಿ. ಪಾರ್ವತಮ್ಮ** (62) ಇವರು ದಿನಾಂಕ 05.05.2021ರ ಬುಧವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಅಂತ್ಯ ಸಂಸ್ಕಾರವು ದಿನಾಂಕ 06.05.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನಡೆಯಲಿದೆ.


ಇಂತಿ ದುಃಖತಪ್ತರಾದ,
**ಎಸ್. ಬಸವರಾಜ್ ಮತ್ತು ಸಹೋದರರು**
**ಶ್ರೀಮತಿ ಎನ್.ವಿ. ರೂಪ ಮತ್ತು ಶ್ರೀ ಎಚ್.ಬಿ. ತಿಮ್ಮೇಶ್ ಮತ್ತು ಮಗಳು ಕು।। ಧೃತಿ ಟಿ.**
**ಶ್ರೀಮತಿ ಎನ್.ವಿ. ರೇಖಾ ಮತ್ತು ಶ್ರೀ ಸುರೇಶ್ ಎಚ್.ಬಿ. ಮತ್ತು ಮಗಳು ಕೀರ್ತನ ಎಸ್.**

## ದುರ್ಗಾಬಾಯಿ ಬೆಟಗೇರಿ ನಿಧನ




ದಾವಣಗೆರೆ ನಿಟುವಳ್ಳಿ ಹೊಸ ಬಡಾವಣೆ ವಾಸಿ ದಿ।। ಯಲ್ಲಪ್ಪ ಬೆಟಗೇರಿ ಅವರ ಪತ್ನಿ, ಕೆ.ವೈ. ಬೆಟಗೇರಿ ಅವರ ಮಾತೃಶ್ರೀಯವರಾದ ಶ್ರೀಮತಿ ದುರ್ಗಾಬಾಯಿ ಯಲ್ಲಪ್ಪ ಬೆಟಗೇರಿ (90) ಅವರು ದಿನಾಂಕ 05.05.2021ರ ಬುಧವಾರ ಬೆಳಗಿನ ಜಾವ 4.30ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ದಿನಾಂಕ 05.05.2021ರ ಬುಧವಾರದಂದು ದಾವಣಗೆರೆಯ ರುದ್ರಭೂಮಿಯಲ್ಲಿ ನೆರವೇರಿತು.

## ಜೆ.ಎಂ. ಬಡ್ನಿ ಅಲಿಸ್ (ಸಿದ್ದಿಖ್) ನಿಧನ



3ನೇ ಮುಖ್ಯ ರಸ್ತೆ, 12ನೇ ಕ್ರಾಸ್, ಜೆ.ಸಿ. ಬಡಾವಣೆ, ಹರಿಹರ. ಜೆ.ಎಂ. ಬಡ್ನಿ ಅಲಿಸ್ (ಸಿದ್ದಿಖ್) ಇವರು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪುತ್ರರು, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.04.2021 ಶುಕ್ರವಾರ ಬೆಳಿಗ್ಗೆ 9 ಘಂಟೆಗೆ ನೆರವೇರಿಸಲಾಯಿತು.

## ರೇಣುಕಾ ಬಾದಾಮಿ ನಿಧನ



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ 1ನೇ ಹಂತ, 2ನೇ ಮೇನ್, 6ನೇ ಕ್ರಾಸ್ ವಾಸಿ ಬಿಇಎಂಎಲ್ ನಿವೃತ್ತ ಇಂಜಿನಿಯರ್ ಮುರಿಗೇಶಪ್ಪ ಬಾದಾಮಿ ಅವರ ಧರ್ಮಪತ್ನಿ ಶ್ರೀಮತಿ ರೇಣುಕಾ ಬಾದಾಮಿ (65) ಅವರು ದಿನಾಂಕ 5.5.2021ರ ಬುಧವಾರ ರಾತ್ರಿ 12 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.5.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹೊನ್ನಾಳಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬಿದರಗಡ್ಡೆ ಸ್ವೀಕರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ಇರುವುದರಿಂದ ಹೊನ್ನಾಳಿ ಮತ್ತು ಕತ್ತಿಗೆ ವಿ.ವಿ. ಕೇಂದ್ರಗಳಿಂದ ಸರಬರಾಜಾಗುವ ಹಳ್ಳಿಗಳು ಮತ್ತು ಹೊನ್ನಾಳಿ ಪಟ್ಟಣಕ್ಕೆ ಇಂದು ಬೆಳಿಗ್ಗೆ 9 ರಿಂದ 12 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಸಹಕರಿಸುವಂತೆ ಬೆಸ್ಕಾಂ ಇಲಾಖೆ ತಿಳಿಸಿದೆ.

# ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ ಪಡೆಯುವುದು ಸೂಕ್ತ

ದಾವಣಗೆರೆ, ಮೇ 5- ಕೊರೊನಾ ಲಕ್ಷಣವಿದ್ದವರು ಆರಂಭಿಕ ಹಂತದಲ್ಲಿಯೇ ಬಂದು ಚಿಕಿತ್ಸೆ ಪಡೆದುಕೊಳ್ಳಿ ಹಾಗೂ ಸರ್ಕಾರದ ಕೊರೊನಾ ಮಾರ್ಗಸೂಚಿಯಂತೆ ನಡೆದುಕೊಳ್ಳಿ ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್ ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂಜಯ್, ಎ.ಎಸ್. ಮಂಜುನಾಥ್, ತಿರುಮಲೇಶ್ ಇನ್ನಿತರರು ಹೇಳಿದ್ದಾರೆ.


ಚಾಮರಾಜನಗರದಲ್ಲಿ ಆದ ಘಟನೆಗೆ ಪ್ರಕೋಷ್ಠ ಸಂತಾಪ ಸೂಚಿಸುತ್ತದೆ. ವಿರೋಧ ಪಕ್ಷಗಳು ವೃಥಾ ಸರ್ಕಾರವನ್ನು ಟೀಕಿಸುತ್ತಿವೆ. ದೇಶದಲ್ಲಿ ಲಸಿಕೆಯ ಅವ್ಯವಸ್ಥೆಗೆ ಕಾಂಗ್ರೆಸ್ ನೇರ ಹೊಣೆಯಾಗಿದೆ. ಕಾರಣ ದೇಶಕ್ಕೆ ಸಮರ್ಪಣೆ ಮಾಡಿ, ಲಸಿಕೆ ಹಾಕಿಸಿಕೊಳ್ಳಲು ಪ್ರಧಾನಿಗಳು ಕರೆ ನೀಡಿದಾಗ ಕಾಂಗ್ರೆಸ್ ಲಸಿಕೆಯನ್ನು ಬಿಜೆಪಿ ಲಸಿಕೆ ಎಂದು ವ್ಯಂಗ್ಯ ಮಾಡಿದ್ದಲ್ಲದೆ, ಲಸಿಕೆ ಕುರಿತು ಜನರಿಗೆ ಹೆದರಿಕೆ ಬರುವ ಹಾಗೆ ಮಾಡಿತು. ಇದೀಗ ಒಟ್ಟಿಗೆ ಜನರು ಲಸಿಕೆಗಾಗಿ ಮುಗಿ ಬೀಳುತ್ತಿರುವುದು ಅವ್ಯವಸ್ಥೆಗೆ ಕಾರಣವಾಗಿದೆ ಎಂದಿದ್ದಾರೆ.

# ಜಿಲ್ಲೆಯಲ್ಲಿ ಲಸಿಕೆ ಹಾಕಿಸಿಕೊಳ್ಳಲು ವಿಕಲಚೇತನರಿಗೆ ಸೂಚನೆ

ದಾವಣಗೆರೆ, ಮೇ 5- ಜಿಲ್ಲೆಯಲ್ಲಿರುವ 18 ವರ್ಷ ಮೇಲ್ಪಟ್ಟ ಎಲ್ಲಾ ವಿಕಲಚೇತನರು ಕೋವಿನ್ ಆ್ಯಪ್ ಮೂಲಕ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ಸೂಚನೆ ನೀಡಿದ್ದಾರೆ.

ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಅಥವಾ ಜಿಲ್ಲಾ ಆಸ್ಪತ್ರೆಯಲ್ಲಿ ವ್ಯಾಕ್ಸಿನ್ ಹಾಕಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನಲ್ಲಿ ತಾಲ್ಲೂಕು ನೋಡಲ್ ಅಧಿಕಾರಿಗಳಾಗಿ ನೇಮಿಸಿರುವ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಥವಾ ಹಿರಿಯ ಮೇಲ್ವಿಚಾರಕರನ್ನು ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನೇಮಿಸಿರುವ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಆರ್‌ಡಬ್ಲ್ಯೂ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು), ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯುಆರ್‌ಡಬ್ಲ್ಯೂ (ನಗರ ಪುನರ್ವಸತಿ ಕಾರ್ಯಕರ್ತರು, ಪರಶುರಾಮ - 7353150170, ಕಮಲಮ್ಮ – 9980581755) ಮತ್ತು ಪ್ರತಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಆರ್‌ಡಬ್ಲ್ಯೂ (ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು ತಾಲ್ಲೂಕು ಪಂಚಾಯಿತಿ, ದಾವಣಗೆರೆ ದೂರವಾಣಿ ಸಂಖ್ಯೆ: 9590829024, ಹರಿಹರ – 9886366809 / 9844955315 / ಯು.ಆರ್.ಡಬ್ಲ್ಯೂ - 7406079109, ಹೊನ್ನಾಳಿ - 98863 66809, ಜಗಳೂರು – 9902105734, ಚನ್ನಗಿರಿ – 99457 38141, ನ್ಯಾಮತಿ – 9886366809) ರವರಿಂದ ಮಾಹಿತಿ ಪಡೆದು ಎಲ್ಲ ವಿಕಲಚೇತನರು ವ್ಯಾಕ್ಸಿನ್ ಹಾಕಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

# ಬಸವ ಪ್ರಭಾತ್ ಫೇರಿ, ಜನಜಾಗೃತಿ ಪಾದಯಾತ್ರೆ ರದ್ದು



ದಾವಣಗೆರೆ, ಮೇ 5- ಬಸವ ಜಯಂತಿ ಅಂಗವಾಗಿ ನಗರದಲ್ಲಿ ಪ್ರತಿ ವರ್ಷ ನಡೆಯುತ್ತಿದ್ದ ಬಸವ ಪ್ರಭಾತ್ ಫೇರಿ, ಜನಜಾಗೃತಿ ಪಾದಯಾತ್ರೆಯನ್ನು ಈ ಬಾರಿ ರದ್ದು ಮಾಡಲಾಗಿದೆ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮತ್ತು ಚೌಕಿಪೇಟೆಯ ವೀರಶೈವ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಮತ್ತು ಹರ್ಡೇಕರ್ ಮಂಜಪ್ಪ ಅವರಿಂದ 1917 ರಲ್ಲಿ ಬಸವ ಪ್ರಭಾತ್ ಫೇರಿ, ಜನಜಾಗೃತಿ ಪಾದಯಾತ್ರೆ ಪ್ರಾರಂಭಿಸಲಾಗಿತ್ತು. ನಾಡಿದ್ದು ದಿನಾಂಕ 7ರಿಂದ ಇದೇ ದಿನಾಂಕ 14 ರವರೆಗೆ ನಡೆಸಲುದ್ದೇಶಿಸಿದ್ದ ಪ್ರಭಾತ್ ಫೇರಿಯನ್ನು ಕೊರೊನಾ ವೈರಸ್ ಹೆಚ್ಚಿರುವ ಹಿನ್ನೆಲೆಯಲ್ಲಿ ಸರ್ಕಾರ ಲಾಕ್‌ಡೌನ್ ಗೆ ಆದೇಶ ಮಾಡಿರುವುದರಿಂದ ರದ್ದು ಮಾಡಲಾಗಿದೆ ಎಂದು ಅವರು ಹೇಳಿದರು.

ಸರ್ವ ಭಕ್ತರು ತಮ್ಮ ಮನೆಗಳಲ್ಲಿಯೇ ಶ್ರೀ ಬಸವೇಶ್ವರರ ವಚನಗಳನ್ನು ಪಠಣ ಮಾಡಿ, ಕೊರೊನಾ ಮಹಾಮಾರಿ ಸಂಪೂರ್ಣ ನಾಶವಾಗಲಿ ಎಂದು ಪ್ರಾರ್ಥಿಸುವಂತೆ ಶ್ರೀ ಬಸವ ಪ್ರಭು ಸ್ವಾಮೀಜಿ ಮತ್ತು ಕಣಕುಪ್ಪಿ ಮುರುಗೇಶಪ್ಪ ಅವರುಗಳು ವಿನಂತಿಸಿದ್ದಾರೆ.

# ಬಿಜೆಪಿ ಕಾರ್ಯಕರ್ತರ ಮೇಲಿನ ಹಿಂಸಾಚಾರ ವಿರೋಧಿಸಿ ಪ್ರತಿಭಟನೆ




ದಾವಣಗೆರೆ, ಮೇ 5- ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಟಿಎಂಸಿ ಕಾರ್ಯಕರ್ತರು ನಡೆಸಿರುವ ಹಿಂಸಾಚಾರವನ್ನು ವಿರೋಧಿಸಿ, ದಾವಣಗೆರೆ ಉತ್ತರ ವಲಯದ ಬಿಜೆಪಿ ವತಿಯಿಂದ ಕೋವಿಂದ್ ಮಾರ್ಗಸೂಚಿ ಅನುಸರಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಉತ್ತರ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಎನ್.ಹನುಮಂತಪ್ಪ, ಬಸವರಾಜಯ್ಯ, ಉಪಾಧ್ಯಕ್ಷ ರಾಜು ಶಾಮನೂರು, ಕಾರ್ಯದರ್ಶಿ ರಾಜೇಶ್, ಒಬಿಸಿ ಪ್ರಧಾನ ಕಾರ್ಯದರ್ಶಿ ಎಂ.ಎನ್. ಚಂದ್ರಶೇಖರ್, ಕಾರ್ಯಕರ್ತರಾದ ನಾಗರಾಜ್, ಮಂಜುನಾಥ್ ಭಾಗವಹಿಸಿದ್ದರು.

## ಓದುಗರ ಪತ್ರ

# ಗೂಳಿಹಟ್ಟಿ ಶೇಖರ್ ಸಮಯೋಚಿತ ಕಾರ್ಯ ಮಾದರಿಯಾಗಲಿ

**ಮಾನ್ಯರೇ,**

ಹೊಸದುರ್ಗ ತಾಲ್ಲೂಕು ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಆಕ್ಸಿಜನ್ ಕೊರತೆಯಾದ ಸಂದರ್ಭದಲ್ಲಿ ಅಲ್ಲಿನ ಶಾಸಕ ಗೂಳಿಹಟ್ಟಿ ಶೇಖರ್ ಅವರು ವೃತಾ ಸಮಯ ಹಾಳು ಮಾಡದೇ ಸೂಕ್ತ ನಿರ್ಧಾರ ತೆಗೆದುಕೊಂಡು ಭದ್ರಾವತಿಯಿಂದ ಆಕ್ಸಿಜನ್ ಸಿಲಿಂಡರ್‌ಗಳನ್ನು ತಮ್ಮ ಸ್ವಂತ ಖರ್ಚಿನಿಂದ ತರಿಸಿ ರೋಗಿಗಳ ಪ್ರಾಣ ಉಳಿಸಿರುವುದು ಶ್ಲಾಘನೀಯವಾದ ಕಾರ್ಯ.

ಪ್ರತಿ ಊರಿನ ಎಲ್ಲಾ ಆಸ್ಪತ್ರೆಗಳಲ್ಲೂ ಅಲ್ಲಿನ ವೈದ್ಯರುಗಳು, ಜಿಲ್ಲೆಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕಾನೂನಿನ ನೆಪ ಹೇಳಿ ಒಬ್ಬರನ್ನೊಬ್ಬರು ದೂಷಿಸದೆ, ಆಕ್ಸಿಜನ್ ದೊರೆಯುವ ಸ್ಥಳವನ್ನು ತಿಳಿದುಕೊಂಡು, ದಾನಿಗಳ ಮುಖಾಂತರವಾಗಲೀ, ಸಂಘ-ಸಂಸ್ಥೆಗಳ ಮುಖಾಂತರವಾಗಲೀ ವ್ಯವಸ್ಥೆ ಮಾಡಿ ರೋಗಿಗಳ ಪ್ರಾಣ ಉಳಿಸುವಂತಾಗಲಿ. ಇದು ಈ ಸಮಯದ ತುರ್ತು ಕಾರ್ಯವೆಂದು ತಿಳಿದು ಕಾರ್ಯಪ್ರವೃತ್ತರಾಗಲಿ.

- ಐಗೂರು ಸಿ. ಪ್ರಭು, ದಾವಣಗೆರೆ.

# ನ್ಯಾಯಾಲಯ ಆವರಣದಲ್ಲಿ ಜಾಗೃತಿ




ದಾವಣಗೆರೆ, ಮೇ 5- ನಗರದ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ಕೋವಿಡ್ ಜಾಗೃತಿ ಅಭಿಯಾನವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಕೆ.ಬಿ. ಗೀತಾ ಅವರು ಕೋವಿಡ್ ಜಾಗೃತಿ ಸಂದೇಶವನ್ನು ನೀಡಿ, ಅಭಿಯಾನಕ್ಕೆ ಚಾಲನೆ ನೀಡಿದರು.

ಅಗತ್ಯವಿಲ್ಲದ ಪ್ರಕರಣಗಳಲ್ಲಿ ಕಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗುವ ಅವಶ್ಯಕತೆ ಇಲ್ಲ. ತೀರ ಅತ್ಯಗತ್ಯ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಸೇರಿದಂತೆ, ವಿವಿಧ ಕೋರ್ಟುಗಳ ನ್ಯಾಯಾಧೀಶರುಗಳು, ವಕೀಲರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕಾನೂನು ನೆರವು ಸಹಾಯವಾಣಿ



ದಾವಣಗೆರೆ, ಮೇ 5- ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜನಸಾಮಾನ್ಯರಿಗೆ ಕಾನೂನು ಸೇವೆ ಒದಗಿಸಲು, ಸಹಾಯವಾಣಿ ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲಾ ಮಟ್ಟದಲ್ಲಿಯೂ ಕಾನೂನು ಸೇವಾ ಸಹಾಯವಾಣಿಯನ್ನು ಆರಂಭಿಸಿದೆ.

ಸಹಾಯವಾಣಿ ಕೇಂದ್ರದಲ್ಲಿ ಮೂವರು ಪ್ಯಾನಲ್ ವಕೀಲರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೋವಿಡ್ ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರಿಗಾಗಿ ದಾವಣಗೆರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿಯೂ ಸಹ ಕಾನೂನು ಸೇವಾ ಸಹಾಯವಾಣಿ ಸಂಖ್ಯೆ: 08192-296364, ಮೊ: 9481167005 ಕಾರ್ಯ ನಿರ್ವಹಿಸುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಪ್ರವೀಣ್ ನಾಯಕ್ ತಿಳಿಸಿದ್ದಾರೆ.

# 1200 ಮೆಟ್ರಿಕ್ ಟನ್ ಆಕ್ಸಿಜನ್

**(1ನೇ ಪುಟದಿಂದ)** ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಸ್ಪತ್ರೆಗಳು ಹಾಗೂ ಜಿಲ್ಲಾಧಿಕಾರಿಗಳ ಆಕ್ಸಿಜನ್ ನಡವಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಕರ್ನಾಟಕ ಕಾನೂನು ಪ್ರಾಧಿಕಾರದ ಅಧ್ಯಕ್ಷ ಹಾಗೂ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್. ಗೋಪಾಲಗೌಡ ಅವರ ನೇತೃತ್ವದಲ್ಲಿ ತನಿಖೆ ನಡೆಸುವಂತೆಯೂ ಆದೇಶಿಸಿದೆ.

ಈ ಸಮಿತಿಯು ಮುಂದಿನ ಸೋಮವಾರದೊಳಗಾಗಿ ತನಿಖೆ ನಡೆಸಿ, ಪೀಠಕ್ಕೆ ವರದಿ ನೀಡಬೇಕು. ಸಮಿತಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಮುಖ್ಯಕಾರ್ಯದರ್ಶಿಯವರು ಒದಗಿಸಿಕೊಡಬೇಕೆಂದು ಪೀಠ ಆದೇಶಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದೆಡೆ ನ್ಯಾಯಮೂರ್ತಿ ಬಿ.ಎ. ಪಾಟೀಲ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಿ, ರಾಜ್ಯ ಸರ್ಕಾರ ಆದೇಶ ಮಾಡಿದ ಬೆನ್ನಲ್ಲೇ ನ್ಯಾಯಾಲಯ ಇಂತಹ ತೀರ್ಮಾನ ಕೈಗೊಂಡಿದೆ.

ಹಗರಣದಲ್ಲಿ ಎಲ್ಲಿ ಲೋಪವಾಗಿದೆ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ನ್ಯಾಯಾಲಯ ಇಂತಹ ತೀರ್ಮಾನ ಕೈಗೊಂಡಂತಿದೆ.

ರಾಜ್ಯ ಸರ್ಕಾರ 1765 ಮೆಟ್ರಿಕ್ ಟನ್ ಆಮ್ಲಜನಕವನ್ನು ಪ್ರತಿನಿತ್ಯ ಪೂರೈಸುವಂತೆ ಕೇಂದ್ರವನ್ನು ಕೋರಿದೆ. ಆದರೆ ಸರಬರಾಜು ಆಗುತ್ತಿರುವುದು ಕೇವಲ 850 ಟನ್ ಮಾತ್ರ.

ಮತ್ತೆ ಹೆಚ್ಚುವರಿಯಾಗಿ 100 ಟನ್ ನೀಡುವುದಾಗಿ ಕೇಂದ್ರ ನ್ಯಾಯಾಲಯದ ಗಮನಕ್ಕೆ ತಂದಿತ್ತು. ಆದರೆ ಇದನ್ನು ಒಪ್ಪದ ನ್ಯಾಯಾಲಯ ತಕ್ಷಣ 1250 ಮೆಟ್ರಿಕ್ ಟನ್‌ಗೆ ಸೂಚಿಸಿದೆ. ಅಲ್ಲದೆ ಇನ್ನೊಂದು ವಾರದಲ್ಲಿ ರಾಜ್ಯ ಸರ್ಕಾರ ತಮಗೆ ಪ್ರತಿನಿತ್ಯ ಎಷ್ಟು ಆಕ್ಸಿಜನ್ ಬೇಕೆಂದು ವರದಿ ನೀಡಲಿದೆ.

ಆ ವರದಿಯನ್ನು ಕೇಂದ್ರ ಮಾನ್ಯ ಮಾಡಬೇಕೆಂದು ಆದೇಶ ಮಾಡಿದೆ. ಇದರ ಜೊತೆಗೆ ರೋಗಿಗಳಿಗೆ ಅಗತ್ಯವಾಗಿರುವ ರೆಮ್‌ಡಿಸಿವಿರ್ ಚುಚ್ಚುಮದ್ದುಗಳು ರಾಜ್ಯಕ್ಕೆ ಪ್ರತಿನಿತ್ಯ 44 ಸಾವಿರ ಬಾಟಲಿ ಬೇಕಾಗಿದೆ. ಆದರೆ ಸರಬರಾಜು ಆಗುತ್ತಿರುವುದು 18 ಸಾವಿರ ಮಾತ್ರ. ಇದನ್ನು ಎರಡು ಮೂರು ದಿನಗಳಲ್ಲಿ ರಾಜ್ಯಕ್ಕೆ ಹೆಚ್ಚುವರಿ ನೀಡುವುದಾಗಿ ಕೇಂದ್ರ ನ್ಯಾಯಾಲಯಕ್ಕೆ ಭರವಸೆ ನೀಡಿದೆ. ರೋಗಿಗಳಿಗೆ ಹಾಸಿಗೆ ಹಂಚಿಕೆ ಸಂಬಂಧಿಸಿದಂತೆ ನಾಳೆ ನ್ಯಾಯಾಲಯ ಮಹತ್ವದ ತೀರ್ಪು ನೀಡಲಿದೆ.

# ಮೀಸಲಾತಿ ಸಂವಿಧಾನ ಬಾಹಿರ

**(1ನೇ ಪುಟದಿಂದ)** ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಅಧಿಕಾರ ವಿಲ್ಲ. ರಾಷ್ಟ್ರಪತಿ ಮಾತ್ರ ಈ ಬಗ್ಗೆ ಅಧಿಕಾರ ಹೊಂದಿದ್ದಾರೆ ಎಂದು ಸಂವಿಧಾನಕ್ಕೆ ಮಾಡಿದ 102ನೇ ತಿದ್ದುಪಡಿಯ ಸಿಂಧುತ್ವವನ್ನೂ ಸಹ ನ್ಯಾಯಲಯ ಎತ್ತಿ ಹಿಡಿದಿದೆ.

ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರ ಹೊಸ ಪಟ್ಟಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಬೇಕು. ಆ ಪಟ್ಟಿ ಪ್ರಕಟವಾಗುವವರೆಗೂ ಈಗಿರುವ ಪಟ್ಟಿಯೇ ಮುಂದುವರೆಯಲಿದೆ ಎಂದು ನ್ಯಾಯಾಲಯ ಹೇಳಿದೆ. ಮೀಸಲಾತಿಗೆ ಶೇ.50ರಷ್ಟು ಮಿತಿ ಇರಬೇಕು ಎಂಬ ಮಂಡಲ್ ತೀರ್ಪಿನ ಅಂಶದ ಮರು ಪರಿಶೀಲನೆಯನ್ನು ವಿಸ್ತೃತ ಪೀಠದ ಪರಿಶೀಲನೆಗೆ ವಹಿಸಬೇಕೆಂಬ ಮನವಿಯನ್ನೂ ಸಹ ನ್ಯಾಯಾಲಯ ತಳ್ಳಿ ಹಾಕಿದೆ.

ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವುದನ್ನು ಬಾಂಬೆ ಹೈಕೋರ್ಟ್ 2019ರಲ್ಲಿ ಎತ್ತಿ ಹಿಡಿದಿತ್ತು. ಈ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ಅರ್ಜಿಗಳನ್ನು ದಾಖಲಿಸಲಾಗಿತ್ತು.

# ಕೋವಿಡ್ ನಿಯಂತ್ರಿಸುವಲ್ಲಿ ಸರ್ಕಾರ ವಿಫಲ

**ರಾಷ್ಟ್ರಪತಿ ಆಳ್ವಿಕೆ ಹೇರಲು ಒತ್ತಾಯ**

ದಾವಣಗೆರೆ, ಮೇ 5- ಕೋವಿಡ್ ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದ್ದು, ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆ ಹೇರುವಂತೆ ವಕೀಲರಾದ ಅನಿಸ್‌ಪಾಷಾ ಒತ್ತಾಯಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಕ್ಸಿಜನ್ ಕೊರತೆಯಿಂದ ಚಾಮರಾಜನಗರದಲ್ಲಿ 24 ಸೇರಿದಂತೆ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಸಾವನ್ನಪ್ಪಿದ್ದಾರೆ. ಈ ಎಲ್ಲಾ ಸಾವಿಗೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ ಎಂದರು. ರಾಜ್ಯದ ಜನತೆಯ ಆರೋಗ್ಯ ಕಾಪಾಡಬೇಕಾದ ಸರ್ಕಾರ, ಚಿಕಿತ್ಸೆಗೆಂದು ದಾಖಲಾದ ರೋಗಿಗಳ ಸಾವಿಗೆ ಕಾರಣವಾಗಿದೆ. ಕೋವಿಡ್ ನಿಯಂತ್ರಣದಲ್ಲಿ ಸರ್ಕಾರ ವಿಫಲವಾಗಿದ್ದರಿಂದ ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಸರ್ಕಾರದ ನಿರ್ಲಕ್ಷತನದಿಂದ ಸಾವನ್ನಪ್ಪಿದ ಮೃತ ಕುಟುಂಬದವರಿಗೆ ಸೂಕ್ತ ಪರಿಹಾರ ಒದಗಿಸುವಂತೆ ಮನವಿ ಮಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೊರೊನಾ ಸೋಂಕು ಹೆಚ್ಚಾಗಲು ಜನರೇ ಕಾರಣ ಎಂದು ಹೇಳಿರುವುದು ಸಲ್ಲದು ಎಂದರು.

ಚುನಾವಣಾ ಪ್ರಚಾರದಲ್ಲಿ ಭಾಗಿಯಾದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮುಖಂಡರಿಂದಲೇ ಕೊರೊನಾ ಸೋಂಕು ಹೆಚ್ಚಾಗಿದೆ. ಇದನ್ನು ಜನರ ಮೇಲೆ ಹೇರುವುದು ಸರಿಯಲ್ಲ. ಜನರ ಆರೋಗ್ಯ ಮತ್ತು ಜೀವ ರಕ್ಷಣೆ ಮಾಡುವಲ್ಲಿ ಸರ್ಕಾರ ವಿಫಲವಾದ್ದರಿಂದ ರಾಷ್ಟ್ರಪತಿ ಆಳ್ವಿಕೆ ಹೇರಿ ಜನರ ಜೀವ ರಕ್ಷಣೆಗೆ ಮುಂದಾಗಬೇಕೆಂದು ಮನವಿ ಮಾಡಿದರು.

# ಜಿಲ್ಲೆಯಲ್ಲಿ 6.86 ಮಿ.ಮೀ. ಮಳೆ : 12.45 ಲಕ್ಷ ಹಾನಿ

ದಾವಣಗೆರೆ, ಮೇ 5- ಜಿಲ್ಲೆಯಲ್ಲಿ ನಿನ್ನೆ 6.86 ಮಿ.ಮೀ ಸರಾಸರಿ ಮಳೆಯಾಗಿದ್ದು, ಒಟ್ಟಾರೆ ಅಂದಾಜು 12.45 ಲಕ್ಷ ರೂ. ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 0.72 ಮಿ.ಮೀ ವಾಸ್ತವ ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 6.46 ಮಿ.ಮೀ, ಹರಿಹರದಲ್ಲಿ 8.60 ಮಿ.ಮೀ, ಹೊನ್ನಾಳಿ ತಾಲ್ಲೂಕಿನಲ್ಲಿ 11.5 ಮಿ.ಮೀ, ಹಾಗೂ ಜಗಳೂರು ತಾಲ್ಲೂಕಿನಲ್ಲಿ 7.06 ಮಿ.ಮೀ ವಾಸ್ತವ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 6.86 ಮಿ.ಮೀ ವಾಸ್ತವ ಮಳೆಯಾಗಿದೆ.

ಮಾಯಕೊಂಡ ಹೋಬಳಿ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಇಬ್ಬರು ಸಿಡಿಲು ಬಡಿದು ಮೃತ ಪಟ್ಟಿರುತ್ತಾರೆ.

ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು, ಅಂದಾಜು 1 ಲಕ್ಷ ರೂ. ನಷ್ಟ ಸಂಭವಿಸಿರುತ್ತದೆ. ಒಂದು ಎಕರೆ ಎಲೆಬಳ್ಳಿ ಬೆಳೆ ಹಾನಿಯಾಗಿದ್ದು, ಅಂದಾಜು ಮೊತ್ತ 50 ಸಾವಿರ ರೂ. ನಷ್ಟ ಸಂಭವಿಸಿದ್ದು, ತಾಲ್ಲೂಕಿನಲ್ಲಿ ಒಟ್ಟು 1.50 ಲಕ್ಷ ರೂ. ನಷ್ಟ ಸಂಭವಿಸಿರುತ್ತದೆ. ಮೇದನಹಳ್ಳಿ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಸಿಡಿಲು ಬಡಿದು ಮೃತಪಟ್ಟಿರುತ್ತಾರೆ. ಈತ ಶಿರಾ ತಾಲ್ಲೂಕು ಗಿಡ್ಡಪ್ಪಳ ಹಟ್ಟಿ ಗ್ರಾಮದವನಾಗಿದ್ದಾನೆ.

ಚನ್ನಗಿರಿ ತಾಲ್ಲೂಕಿನಲ್ಲಿ 5 ಎಕರೆ ಬಾಳೆ ಬೆಳೆ ಹಾನಿಯಾಗಿದ್ದು, ಅಂದಾಜು 95 ಸಾವಿರ ರೂ. ನಷ್ಟ ಸಂಭವಿಸಿರುತ್ತದೆ. ಜಿಲ್ಲೆಯಲ್ಲಿ ಒಟ್ಟಾರೆ 12.45 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದ್ದು, ಸರ್ಕಾರದ ಮಾರ್ಗಸೂಚಿಯನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

# ಮೂರನೇ ಅಲೆ ನಿಶ್ಚಿತ : ಕೇಂದ್ರ

**(1ನೇ ಪುಟದಿಂದ)** ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೊರೊನಾ ಪರೀಕ್ಷೆಯಲ್ಲಿ ಪಾಸಿಟಿವ್ ಕಂಡು ಬರುತ್ತಿರುವ ಪ್ರಮಾಣ ಶೇ.15ಕ್ಕೂ ಹೆಚ್ಚಾಗಿದೆ.

ಪ್ರಸಕ್ತ ಭಾರೀ ಪ್ರಮಾಣದಲ್ಲಿ ಕೊರೊನಾ ವೈರಸ್ ಹರಡುತ್ತಿರುವುದನ್ನು ಗಮನಿಸಿದಾಗ, ಸೋಂಕಿನ ಮೂರನೇ ಅಲೆ ಬರುವುದನ್ನು ತಪ್ಪಿಸಲಾಗದು. ಆದರೆ, ಯಾವ ಸಮಯದಲ್ಲಿ ಈ ಅಲೆ ಬರುತ್ತದೆ ಎಂಬುದನ್ನು ಊಹಿಸಲಾಗದು. ನಾವು ಹೊಸ ಅಲೆಗಳಿಗೆ ಸಿದ್ಧವಾಗಿರಬೇಕು ಎಂದು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ. ವಿಜಯ ರಾಘವನ್ ಹೇಳಿದ್ದಾರೆ.

ವೈರಸ್ ಬದಲಾದರೂ ನಮ್ಮ ಪ್ರತಿಕ್ರಿಯೆ ಈಗಿರುವಂತೆಯೇ ಇರಬೇಕು. ಮಾಸ್ಕ್, ದೈಹಿಕ ಅಂತರ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಅನಗತ್ಯವಾಗಿ ಹೊರಗಿನವರನ್ನು ಭೇಟಿ ಮಾಡದೇ ಮನೆಯಲ್ಲಿರಬೇಕು ಎಂದು ನೀತಿ ಆಯೋಗದ ಸದಸ್ಯ ಡಾ. ವಿ.ಕೆ. ಪೌಲ್ ಹೇಳಿದ್ದಾರೆ.

# 2ನೇ ಅಲೆ ತೀವ್ರತೆ ಅಂದಾಜಿಸಿರಲಿಲ್ಲ

**(1ನೇ ಪುಟದಿಂದ)** ಪರಿಣಾಮಕಾರಿಯಾಗಿವೆ. ಆದರೂ, ವೈರಸ್ ಮತ್ತಷ್ಟು ಬದಲಾದಂತೆ ನಿಗಾ ವಹಿಸಿ, ಲಸಿಕೆಗಳನ್ನು ಉನ್ನತೀಕರಿಸಬೇಕಿದೆ ಎಂದವರು ಹೇಳಿದ್ದಾರೆ.

ದೇಶದಲ್ಲಿ ಮೊದಲ ಕೊರೊನಾ ಅಲೆ ಬಂದಾಗ, ಅದರ ರೋಗ ನಿರೋಧಕತೆ ಕಡಿಮೆ ಇರುವ ಕಾರಣಕ್ಕಾಗಿ ಎರಡನೇ ಅಲೆ ಬಂದಿದೆ. ರೂಪಾಂತರಿ ಕೊರೊನಾ ಸಹ ಇದಕ್ಕೆ ಮತ್ತೊಂದು ಕಾರಣ ಎಂದವರು ಹೇಳಿದ್ದಾರೆ.

ಸಾಮಾನ್ಯವಾಗಿ ಸೋಂಕಿನ ಎರಡನೆ ಅಲೆ ಬಂದಾಗ ಅದು ಮೊದಲನೆಯದಕ್ಕಿಂತ ಚಿಕ್ಕದಾಗಿರುತ್ತದೆ. ಈ ಬಾರಿ ಹಲವು ಕಾರಣಗಳಿಂದ ಎರಡನೇ ಅಲೆ ದೊಡ್ಡದಾಗಿದೆ. ಇಂತಹ ಅಲೆಯನ್ನು ಅಂದಾಜಿಸಿರಲಿಲ್ಲ ಎಂದು ರಾಘವನ್ ತಿಳಿಸಿದ್ದಾರೆ.

# ಇಎಸ್‌ಐ ಆಸ್ಪತ್ರೆಯಲ್ಲಿ 80 ಬೆಡ್ ವ್ಯವಸ್ಥೆ

**(1ನೇ ಪುಟದಿಂದ)** ಬೇಕಾದ 70 ಮಂಚಗಳನ್ನು ಹೊರಗಡೆಯಿಂದ ತರಿಸುತ್ತೇವೆ ಹಾಗೂ ಕಾಟನ್ ಬೆಡ್, ಫ್ಯಾನ್, ಐವಿ ಡ್ರಿಪ್, ಆಕ್ಸಿಜನ್ ಸಿಲಿಂಡರ್, ಬಿಪಿ ಆಪರೇಟರ್ಸ್‌ಗಳನ್ನು ದಾನಿಗಳಿಂದ ಪೂರೈಸುತ್ತೇವೆ. ಅಲ್ಲದೇ ಆಸ್ಪತ್ರೆಗೆ ಬೇಕಾದ ಟ್ರಾಲಿಗಳು, ವ್ಹೀಲ್‌ಚೇರ್‌ಗಳು, ಐವಿ ಸ್ಟ್ಯಾಂಡ್ ಇತರೆ ಸವಲತ್ತುಗಳ ಕುರಿತು ಮಾಹಿತಿ ನೀಡಿದರೆ ಜಿಲ್ಲಾಡಳಿತದಿಂದ ಪೂರೈಸುತ್ತೇವೆ ಎಂದರು.

ಸಿಜಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸಂಜಯ್ ಮಾತನಾಡಿ, ಆಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ವ್ಯವಸ್ಥೆ ಇಲ್ಲ. ಎಕ್ಸ್‌ರೇ ಯೂನಿಟ್ ಇದೆ. ಆದರೆ, ಫಿಲ್ಮ್‌ಗಳು ಇಲ್ಲ. ಆದ್ದರಿಂದ ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರನ್ನು ಮೊದಲ ಹಂತದ ಚಿಕಿತ್ಸೆ ಪೂರೈಸಿದ ಬಳಿಕ ಚೇತರಿಸಿಕೊಂಡ ರೋಗಿಗಳನ್ನು ಈ ಆಸ್ಪತ್ರೆಗೆ ವರ್ಗಾವಣೆ ಮಾಡಬಹುದು ಎಂದರು.

ನಂತರ ಜಿಲ್ಲಾಧಿಕಾರಿಗಳು ಮಾತನಾಡಿ, ಕೋವಿಡ್ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಮತ್ತು ಡಿ ಗ್ರೂಪ್ ನೌಕರ ವರ್ಗದವರು ಸೇರಿ ಒಟ್ಟು 3 ತಂಡಗಳನ್ನು ರಚಿಸಿಕೊಳ್ಳಬೇಕು. ಪ್ರತಿ ತಂಡಕ್ಕೂ 3 ವೈದ್ಯರು, 3 ಸ್ಟಾಫ್ ನರ್ಸ್, 3 ಡಿ-ಗ್ರೂಪ್ ಸೇರಿದಂತೆ 9 ಜನರ ತಂಡ ರಚಿಸಬೇಕೆಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ ಸಿಇಒ ಡಾ.ವಿಜಯ್ ಮಹಾಂತೇಶ್ ದಾನಮ್ಮನವರ್, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್‌ನಾಯಕ್, ಆರ್.ಎಂ.ಓ ಡಾ. ಸಂಧ್ಯಾರಾಣಿ, ಹಿರಿಯ ತಜ್ಞ ಡಾ.ಅಣ್ಣಪ್ಪಸ್ವಾಮಿ, ಉಪ ವೈದ್ಯಕೀಯ ಅಧೀಕ್ಷಕ ಡಾ.ಚಿದಾನಂದ್, ಡಾ.ನಂದಿನಿ, ಡಾ.ಚಂದನ್, ಡಾ.ಪ್ರಸನ್ನ, ಡಾ.ಅನಿತರಾಣಿ ಸೇರಿದಂತೆ ಹಿರಿಯ ತಜ್ಞರು ಉಪಸ್ಥಿತರಿದ್ದರು.

# ಲಸಿಕಾ ಕೇಂದ್ರಗಳಲ್ಲಿ ರಶ್ಶೋ ರಶ್...

**(1ನೇ ಪುಟದಿಂದ) ಆನ್‌ಲೈನ್‌ಗೆ ಆದ್ಯತೆ ಇಲ್ಲ :** ಗುಂಪು ಸೇರುವಿಕೆ ತಪ್ಪಿಸಲು ಆನ್‌ಲೈನ್ ಮೂಲಕ ಲಸಿಕೆಗಾಗಿ ನೋಂದಣಿ ಮಾಡಬೇಕೆಂದು ತಿಳಿಸಲಾಗಿತ್ತು. ಆದರೆ, ಆನ್‌ಲೈನ್‌ನಲ್ಲಿ ನೋಂದಣಿ ಮಾಡಿದವರನ್ನು ಗುರುತಿಸಲು ಸಾಧ್ಯವಾಗದಷ್ಟು ಜನಜಂಗುಳಿ ಸೇರಿತ್ತು. ಇದರಿಂದಾಗಿ ವೈದ್ಯಕೀಯ ಸಿಬ್ಬಂದಿ ಅಸಹಾಯಕರಾಗಿದ್ದರು.

**ಕೂಪನ್ ವಿತರಣೆ :** ಸಿ.ಜಿ. ಆಸ್ಪತ್ರೆಯಲ್ಲಿನ ಲಸಿಕಾ ಕೇಂದ್ರದಲ್ಲಿ ಮಾತ್ರ ಗುಂಪುಗೂಡುವಿಕೆಯನ್ನು ತಪ್ಪಿಸಲಾಗಿತ್ತು. ಇಲ್ಲಿನ ವೈದ್ಯ ಡಾ. ಸಿದ್ದರಾಮೇಶ್ವರ ಅವರು ಮೊದಲನೇ ಡೋಸ್ ಲಸಿಕೆ ಪಡೆಯುವವರಿಗೆ ಅವಕಾಶವಿಲ್ಲ ಎಂದು ಅಂಥವರನ್ನು ವಾಪಸ್ ಕಳಿಸಿದ್ದರು.

ಕೂಪನ್ ವಿತರಿಸುವ ಮೂಲಕ ಲಸಿಕೆ ಇರುವಷ್ಟು ಜನರು ಮಾತ್ರ ಸರದಿಯಲ್ಲಿರುವಂತೆ ತಿಳಿಸಿದ್ದರು. ಈ ಕೇಂದ್ರದಲ್ಲಿ 20 ಮುಂಚೂಣಿ ಕಾರ್ಯಕರ್ತರು ಹಾಗೂ 280 ಸಾರ್ವಜನಿಕರಿಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿತ್ತು.

ಬೆಳಿಗ್ಗೆ 8 ಗಂಟೆಯಿಂದಲೇ ಜನರು ಇಲ್ಲಿ ಸೇರಿದ್ದರು. ನಾವು 9 ಕ್ಕೆ ಬಂದು ಜನರಿಗೆ ಕೂಪನ್‌ಗಳನ್ನು ವಿತರಿಸಿದ್ದೆವು. ಇದರಿಂದಾಗಿ ಜನಸಂದಣಿ ಕಡಿಮೆಯಾಗಿದೆ. ಜಿಲ್ಲೆಯಲ್ಲಿ 15 ಸಾವಿರಕ್ಕೂ ಹೆಚ್ಚು ಜನರಿಗೆ ಎರಡನೇ ಡೋಸ್ ಲಸಿಕೆ ಬೇಕಾಗಿದೆ. ಹೀಗಾಗಿ ಎರಡನೇ ಡೋಸ್‌ನವರಿಗೆ ಮಾತ್ರ ಲಸಿಕೆ ಕೊಡಲಾಗುತ್ತಿದೆ ಎಂದು ಡಾ. ಸಿದ್ದರಾಮೇಶ್ವರ್ ತಿಳಿಸಿದ್ದಾರೆ.

# 50 ಸಾವಿರ ಸೋಂಕು

**(1ನೇ ಪುಟದಿಂದ)** ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಕೊರೊನಾ ಪರೀಕ್ಷೆಯಲ್ಲಿ ಸೋಂಕಿತರು ಕಂಡು ಬರುವ ಪ್ರಮಾಣ ರಾಜ್ಯದಲ್ಲೀಗ ಶೇ.32.28ಕ್ಕೆ ತಲುಪಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚಿನ 23,106 ಸೋಂಕಿತರು ಕಂಡು ಬಂದಿದ್ದು, ಇಲ್ಲಿ 161 ಜನ ಸಾವನ್ನಪ್ಪಿದ್ದಾರೆ.

ಉಳಿದಂತೆ ಮೈಸೂರಿನಲ್ಲಿ 2,790, ತುಮಕೂರಿನಲ್ಲಿ 2,335, ಉಡುಪಿಯಲ್ಲಿ 1,655 ಹಾಗೂ ಮಂಡ್ಯದಲ್ಲಿ 1,621 ಸೋಂಕಿತರು ಕಂಡು ಬಂದಿದ್ದಾರೆ.

# ಬೇಸಿಗೆ ರಜೆ ಅವಧಿ ಪರಿಷ್ಕರಣೆ

**(1ನೇ ಪುಟದಿಂದ)** 10ನೇ ತರಗತಿ ವಿದ್ಯಾರ್ಥಿಗಳಿಗೆ ಜೂನ್ 15 ರಿಂದ ಮುಂದಿನ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

# ಪ್ರವೇಶದ ಬೆನ್ನಲ್ಲೇ ನ್ಯಾಯಿಕ ತನಿಖೆ

**(1ನೇ ಪುಟದಿಂದ)** ಒದಗಿಸುವ ಸಂಬಂಧ ಸಾರ್ವಜನಿಕ ಅರ್ಜಿಗಳನ್ನು ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಂಡ ಮುಖ್ಯನ್ಯಾಯಮೂರ್ತಿ ಅಭಯ ಶ್ರೀನಿವಾಸ್ ಓಕ ಹಾಗೂ ನ್ಯಾಯಮೂರ್ತಿ ಅರವಿಂದ್‌ಕುಮಾರ್ ಅವರನ್ನೊಳಗೊಂಡ ವಿಭಾಗೀಯ ಪೀಠ ವಿಶೇಷ ವಿಚಾರಣೆ ಕೈಗೆತ್ತಿಕೊಂಡು ಚಾಮರಾಜನಗರ ಘಟನೆ ಬಗ್ಗೆ ನಿನ್ನೆ ಆದೇಶ ಮಾಡಿತು.

ನ್ಯಾಯಮೂರ್ತಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪೀಠ ಇಂದು ತನ್ನ ನಿರ್ಧಾರಗೊಳ್ಳುವುದಿತ್ತು. ಆದರೆ, ರಾಜ್ಯ ಸರ್ಕಾರ ಏಕಾಏಕಿ ತಡರಾತ್ರಿ ನ್ಯಾಯಮೂರ್ತಿ ಬಿ.ಎ. ಪಾಟೀಲ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ. ಮೇ 3 ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ 24 ರೋಗಿಗಳ ಸಾವಿನ ಕುರಿತಂತೆ ಸಮಿತಿ ತನಿಖೆ ಮಾಡಲಿದೆ.

ಪ್ರಕರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾಧಿಕಾರಿಗಳು ಈ ಸಂಬಂಧಿತ ಎಲ್ಲಾ ದಾಖಲಾತಿಗಳನ್ನು ತನಿಖಾ ಸಮಿತಿಗೆ ಒಪ್ಪಿಸಲು ಆರೋಗ್ಯ ಇಲಾಖೆಗೆ ಸಲ್ಲಿಸಬೇಕೆಂದು ಆದೇಶದಲ್ಲಿ ಹೇಳಲಾಗಿದೆ.

ಈ ಮಧ್ಯೆ ನ್ಯಾಯಾಲಯ ಆಕ್ಸಿಜನ್‌ಗೆ ಸಂಬಂಧಿಸಿದಂತೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾಸ್ಪತ್ರೆ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ಕಡತಗಳನ್ನು ತಕ್ಷಣವೇ ವಶಕ್ಕೆ ತೆಗೆದುಕೊಳ್ಳುವಂತೆ ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಆದೇಶಿಸಿದೆ. ಕಡತಗಳನ್ನು ತಮ್ಮ ಬಳಿ ಇಟ್ಟುಕೊಂಡು ತನಿಖಾ ಸಮಿತಿಗೆ ನೀಡಬೇಕು ಎಂದು ಹೇಳಿದೆ.

ಚಾಮರಾಜನಗರ ಪ್ರಕರಣಕ್ಕೆ ಸಂಬಂಧಿಸಿಂತೆ ರಾಜ್ಯಸರ್ಕಾರ ಹಿರಿಯ ಐಎಎಸ್ ಅಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಿ, ತನಿಖೆಗೆ ಆದೇಶ ಮಾಡಿತ್ತು. ಅಷ್ಟೇ ಅಲ್ಲ ವರದಿಯನ್ನು ಮೂರು ದಿನದೊಳಗಾಗಿ ನೀಡಬೇಕೆಂದು ಹೇಳಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಿಭಾಗೀಯ ಪೀಠ ಸ್ವಯಂ ಪ್ರೇರಿತವಾಗಿ ವಿಚಾರಣೆಯನ್ನು ಕೈಗೆತ್ತಿಕೊಂಡು ನ್ಯಾಯಾಂಗ ತನಿಖೆ ನಡೆಸಬೇಕೆಂದು ಆದೇಶ ಮಾಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿದೆ.

# ಎಸ್‌ಎಸ್ ಆಸ್ಪತ್ರೆಗೆ ಡಿಸಿ ಅನಿರೀಕ್ಷಿತ ಭೇಟಿ

**(1ನೇ ಪುಟದಿಂದ)** ರೋಗಿಗಳಿಗೆ ಐಸಿಯು ಬೆಡ್‌ಗಳನ್ನು ನೀಡಬೇಕು. ಇಂದು ಐಸಿಎಂಆರ್ ಪೋರ್ಟಲ್‌ನಲ್ಲಿ 700 ಕ್ಕೂ ಹೆಚ್ಚು ಸೋಂಕಿತರು ಬರುವ ನಿರೀಕ್ಷೆ ಇದೆ. ಹಾಗಾಗಿ ಬೆಡ್ ವಿಸ್ತರಣೆ ಅನಿವಾರ್ಯವಾಗಿದ್ದು, ಆಸ್ಪತ್ರೆಯಲ್ಲಿ ಬೆಡ್, ಆಕ್ಸಿಜನ್ ಸೇರಿದಂತೆ ಎಲ್ಲಾ ಸವಲತ್ತುಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಎಸ್.ಎಸ್.ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಸಾದ್, ವೈದ್ಯಕೀಯ ಅಧೀಕ್ಷಕ ಡಾ. ಕಾಳಪ್ಪನವರ್ ಸೇರಿದಂತೆ ಮತ್ತಿತರರು ಇದ್ದರು.


## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೊಮಾರಪ್ಪ ಬಿನ್ ಲೇಟ್ ದೊಡ್ಡೀರಪ್ಪ, ವಾಸ 6ನೇ ಕ್ರಾಸ್, 60 ಅಡಿ ರಸ್ತೆ, ಲೆನಿನ್ ನಗರ, ದಾವಣಗೆರೆ ಆದ ನಾನು ದಾವಣಗೆರೆಯ ವಿನೋಬನಗರದ ವಾಸಿ ಎ. ಶಿವಶಂಕರಪ್ಪ ಬಿನ್ ಎ. ಮಹಾಲಿಂಗಪ್ಪ ಇವರಿಂದ ಈ ಕೆಳಗೆ ತೋರಿಸಿದ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಿದ್ದು. ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಸಾರ್ವಜನಿಕರಿಗೆ ಯಾವುದಾದರೂ ಹಕ್ಕು ಅಥವಾ ಹಿತಾಸಕ್ತಿ, ತಕರಾರು ಇದ್ದಲ್ಲಿ ಈ ದಿನದಿಂದ 7 ದಿನಗಳ ಒಳಗೆ ನನಗೆ ಭೇಟಿಯಾಗಿ ತಮ್ಮ ಅಹವಾಲುಗಳನ್ನು ತಿಳಿಸಬೇಕಾಗಿ ಈ ನೋಟಿಸ್ ನೀಡಲಾಗಿರುತ್ತದೆ.

**ಷೆಡ್ಯೂಲ್ :** ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾ॥ ದಾವಣಗೆರೆ ಗ್ರಾಮದ ರಿ.ಸ.ನಂ. 128/2ವುಳ್ಳದ್ದರಲ್ಲಿ ಅಲಿನೇಷನ್ ಆಗಿ ಲೇಔಟ್ ಆಗಿರತಕ್ಕ ದಾವಣಗೆರೆ ನಗರ ಸರಹದ್ದಿಗೆ ಸೇರಿದ ಕೊಂಡಜ್ಜಿ ರಸ್ತೆ (ಹಳೇ ಜಾಲಿನಗರ) ಎಸ್.ಪಿ. ಆಫೀಸ್ ಹತ್ತಿರ ಬರುವ ಸೈಟ್ ನಂ 57 ಇದರ ಚಾಲ್ತಿ ಡೋರ್ ನಂ 2185/57 ಅಳತೆ 30x40. ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಸೈಟ್ ನಂ. 56, ಉತ್ತರಕ್ಕೆ : ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ. 58 ದಕ್ಷಿಣಕ್ಕೆ : ಬೇರೆಯವರ ಜಾಗ. ಈ ಮಧ್ಯದ ಸೊತ್ತು.

ಖರೀದಿದಾರರ ಸಹಿ/- ಕೊಮಾರಪ್ಪ

ಫೋ. : 9113052425, 7760307164

# ಸಾಲದ ಮರು ಹೊಂದಾಣಿಕೆಗೆ ಆರ್.ಬಿ.ಐ. ಅವಕಾಶ

**ಕೆಲ ವರ್ಗದ ಸಣ್ಣ ಸಾಲಗಳ ಪಾವತಿಗೆ ಹೆಚ್ಚಿನ ಸಮಯ**

ಮುಂಬೈ, ಮೇ 5 – ಕೆಲ ವರ್ಗದ ವೈಯಕ್ತಿಕ ಹಾಗೂ ಸಣ್ಣ ಸಾಲಗಳ ಮರು ಪಾವತಿಗೆ ಹೆಚ್ಚಿನ ಸಮಯ ನೀಡಿರುವ ರಿಸರ್ವ್ ಬ್ಯಾಂಕ್, ಲಸಿಕೆ ಉತ್ಪಾದಕರೂ ಸೇರಿದಂತೆ ಆರೋಗ್ಯ ವಲಯದವರಿಗೆ 50 ಸಾವಿರ ಕೋಟಿ ರೂ.ಗಳ ವಿಶೇಷ ಹಣಕಾಸು ಸೌಲಭ್ಯ ಕಲ್ಪಿಸಿದೆ.

2020ರಲ್ಲಿ ಸಾಲ ಮರು ಹೊಂದಾಣಿಕೆ ಮಾಡಿಕೊಳ್ಳದ ವ್ಯಕ್ತಿಗಳು, ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ಎರಡು ವರ್ಷಗಳವರೆಗೆ ಸಾಲ ಮರು ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

25 ಕೋಟಿ ರೂ.ಗಳವರೆಗೆ ಸಾಲ ಹೊಂದಿರುವವರಿಗೆ ಈ ಸೌಲಭ್ಯ ಸಿಗಲಿದೆ. ಒಟ್ಟು ಬ್ಯಾಂಕಿಂಗ್ ವ್ಯವಸ್ಥೆಯ ಶೇ.90 ಸಾಲಗಾರರು ಈ ಮರು ಹೊಂದಾಣಿಕೆ ವ್ಯಾಪ್ತಿಗೆ ಬರಲಿದ್ದಾರೆ ಎಂದು ಭಾರತೀಯ ಬ್ಯಾಂಕರ್‌ಗಳ ಒಕ್ಕೂಟ ತಿಳಿಸಿದೆ.

ಕಳೆದ ವರ್ಷ ರಿಸರ್ವ್ ಬ್ಯಾಂಕ್ ಸಣ್ಣ ಸಾಲಗಾರರ ಸಾಲದ ಮರು ಹೊಂದಾಣಿಕೆಗೆ ಅನುಮತಿ ನೀಡಿತ್ತು. ಈ ಬಾರಿ ರಿಸರ್ವ್ ಬ್ಯಾಂಕ್ ಸಾಲದ ಅವಧಿ ಇಲ್ಲವೇ ಬಡ್ಡಿ ದರದ ಮರು ಹೊಂದಾಣಿಕೆಗೆ ಅವಕಾಶ ನೀಡಿದೆ.

ಇದೇ ವೇಳೆ ಲಸಿಕೆ ಉತ್ಪಾದಕರು, ಲಸಿಕೆ ಆಮದುದಾರರು ಹಾಗೂ ಔಷಧೀಯ ಉಪಕರಣಗಳನ್ನು ಉತ್ಪಾದಿಸುವವರಿಗೆ ರೆಪೋ ದರದಲ್ಲಿ ಮೂರು ವರ್ಷಗಳವರೆಗೆ 50 ಸಾವಿರ ಕೋಟಿ ರೂ. ಸಾಲ ನೀಡುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ.

ಮಾರ್ಚ್ 31, 2022ವರೆಗೆ ಈ ಸೌಲಭ್ಯ ಪಡೆಯಬಹುದಾಗಿದೆ.

ಸಣ್ಣ ಹಣಕಾಸು ಬ್ಯಾಂಕು ಹಾಗೂ ಬ್ಯಾಂಕುಗಳು ಸಣ್ಣ ಸಾಲಗಾರರಿಗೆ ಸಾಲ ನೀಡುವ ಸಲುವಾಗಿ 10 ಸಾವಿರ ಕೋಟಿ ರೂ.ಗಳ ದೀರ್ಘಾವಧಿ ರೆಪೋ ನೀಡುವುದಾಗಿಯೂ ತಿಳಿಸಲಾಗಿದೆ.

## ಕೊರೊನಾ : ಉಪ ಚುನಾವಣೆಗಳು ಮುಂದೂಡಿಕೆ

ನವದೆಹಲಿ, ಮೇ 5 – ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮೂರು ಲೋಕಸಭೆ ಹಾಗೂ ಎಂಟು ವಿಧಾನಸಭೆಗಳ ಉಪ ಚುನಾವಣೆಗಳನ್ನು ಮುಂದೂಡಲು ಚುನಾವಣಾ ಆಯೋಗ ನಿರ್ಧರಿಸಿದೆ.

ಕೊರೊನಾ ಪರಿಸ್ಥಿತಿ ಸುಧಾರಿಸುವವರೆಗೂ ಚುನಾವಣೆ ನಡೆಸುವುದು ಸೂಕ್ತವಾಗದು ಎಂದು ಚುನಾವಣಾ ಆಯೋಗ ಹೇಳಿದೆ. ದಾದ್ರಾ ಮತ್ತು ನಗರ್ ಹವೇಲಿ, ಮಧ್ಯ ಪ್ರದೇಶದ ಖಂಡ್ವ, ಹಿಮಾಚಲ ಪ್ರದೇಶದ ಮಂಡಿ ಲೋಕ ಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಬೇಕಿದೆ. ಕರ್ನಾಟಕದ ಸಿಂಧಗಿ ಸೇರಿದಂತೆ ಎಂಟು ವಿಧಾನಸಭಾ ಸ್ಥಾನಗಳಿಗೂ ಚುನಾವಣೆ ನಡೆಯಬೇಕಿದೆ. ಈ ಉಪ ಚುನಾವಣೆಗಳಿಗೆ ಆಯೋಗ ಇನ್ನೂ ಯಾವುದೇ ವೇಳಾಪಟ್ಟಿ ಪ್ರಕಟಿಸಿಲ್ಲ.

# ಕೊರೊನಾ ನಿಯಂತ್ರಣಕ್ಕೆ ಜಿಲ್ಲಾಡಳಿತದೊಂದಿಗೆ ಸಂಘ-ಸಂಸ್ಥೆಗಳು ಕೈಜೋಡಿಸಲಿ : ಸಂಸದ ಸಿದ್ದೇಶ್ವರ


ದಾವಣಗೆರೆ, ಮೇ 5- ಕೊರೊನಾ ಸೋಂಕು ದಿನದಿಂದ ದಿನಕ್ಕೆ ವ್ಯಾಪಕವಾಗಿ ಹರಡುತ್ತಿದ್ದು, ಕೊರೊನಾ ಸೋಂಕನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹಾಗೂ ಕೊರೊನಾ ಸೋಂಕಿತರ ಶುಶ್ರೂಷೆ ಮಾಡುವ ಕಾರ್ಯದಲ್ಲಿ ಜಿಲ್ಲಾಡಳಿತದೊಂದಿಗೆ ಜಿಲ್ಲೆಯ ಸರ್ಕಾರೇತರ ಸಂಘ-ಸಂಸ್ಥೆಗಳು ಕೈಜೋಡಿಸಿ ನೆರವಾಗುವಂತೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಏರ್ಪಾಡಾಗಿದ್ದ ಸಭೆಯಲ್ಲಿ ಸಂಸದ ಡಾ. ಜಿ.ಎಂ.ಸಿದ್ದೇಶ್ವರ ಮನವಿ ಮಾಡಿದರು.

ಸಾರ್ವಜನಿಕರು ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳು ಕೊರೊನಾ ನಿಯಂತ್ರಣದ ಕಾರ್ಯದಲ್ಲಿ ಸಹಭಾಗಿತ್ವ ತೋರಿದಾಗ ಮಾತ್ರ ಕೊರೊನಾ ನಿಯಂತ್ರಣ ಸಾಧ್ಯ.

ಈಗಾಗಲೇ ನಗರದ ಸಿ.ಜಿ. ಆಸ್ಪತ್ರೆಯಲ್ಲಿ ದಾಖಲಾಗಿರುವ ಕೊರೊನಾ ಸೋಂಕಿತರಿಗೆ ಊಟ, ಉಪಚಾರದ ಹೊಣೆಯನ್ನು ಒಂದು ಸಂಸ್ಥೆಯವರು ವಹಿಸಿಕೊಂಡಿದ್ದಾರೆ. ಅದೇ ರೀತಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿಯೂ ದಾಖಲಾಗಿರುವ ಸೋಂಕಿತರಿಗೆ ಊಟ, ಉಪಚಾರ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಸಂಘ-ಸಂಸ್ಥೆಗಳು ಮುಂದೆ ಬಂದರೆ ಅನುಕೂಲವಾಗಲಿದೆ ಎಂದರು.

ಜಿಲ್ಲೆಯ ಎಲ್ಲಾ ಸೋಂಕಿತರು ಜಿಲ್ಲಾಸ್ಪತ್ರೆಯನ್ನು ಅವಲಂಬಿಸಿ ದಾವಣಗೆರೆಗೆ ಬಂದರೆ ಇಲ್ಲಿ ಸಾಕಷ್ಟು ಒತ್ತಡ ಉಂಟಾಗಲಿದೆ. ಈ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿಯೇ ಸೋಂಕಿತರನ್ನು ದಾಖಲಿಸಿಕೊಂಡು ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆ ಅವಶ್ಯವಿರುವ ರೋಗಿಗಳನ್ನು ಮಾತ್ರ ದಾವಣಗೆರೆ ಜಿಲ್ಲಾಸ್ಪತ್ರೆಗೆ ಕಳುಹಿಸಿ ಎಂದು ಸಲಹೆ ನೀಡಿದರು.

ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ತಜ್ಞ ವೈದ್ಯರು ನೇಮಕಗೊಂಡರೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿಯೇ ಉತ್ತಮ ಚಿಕಿತ್ಸೆ ಲಭ್ಯವಾಗಲಿದೆ ಎಂದರು.



**ಕೋವಿಡ್ ಕೇರ್ ಸೆಂಟರ್‌ಗಳಿಗೆ ಸಂಘ ಪರಿವಾರದಿಂದ ಸ್ವಯಂ ಸೇವಕರು**

ತಾಲ್ಲೂಕುಗಳಲ್ಲಿ ತೆರೆಯಲಾಗಿರುವ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಕಾರ್ಯನಿರ್ವಹಿಸಲು ಸಾಕಷ್ಟು ಜನ ಸ್ವಯಂ ಸೇವಕರು ಬೇಕು ಎನ್ನುವ ವಿಷಯವನ್ನು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದಾಗ ಸಭೆಯಲ್ಲಿ ಹಾಜರಿದ್ದ ಸಂಘ ಪರಿವಾರದ ಪ್ರಮುಖರು ಸ್ವಯಂ ಸೇವಕರನ್ನು ಒದಗಿಸುವ ಭರವಸೆ ನೀಡಿದರು. ಅದೇ ರೀತಿ ಜಿಲ್ಲಾಡಳಿತದೊಂದಿಗೆ ಎಲ್ಲಾ ರೀತಿಯಿಂದಲೂ ನೆರವಾಗುವ ಭರವಸೆ ನೀಡಿದರು.

ಬೇರೆ ಜಿಲ್ಲೆಗಳಲ್ಲಿ ಆಗಿರುವ ತಪ್ಪುಗಳಿಂದ ನಾವು ಪಾಠ ಕಲಿಯಬೇಕಾಗಿದೆ, ಅಂತಹ ತಪ್ಪುಗಳು ನಮ್ಮ ಜಿಲ್ಲೆಯಲ್ಲಿ ಆಗದಂತೆ ಎಚ್ಚರ ವಹಿಸಬೇಕಾಗಿದೆ. ಆದ್ದರಿಂದ, ಎಲ್ಲರೂ ಜಾಗ್ರತೆಯಿಂದ ಕೆಲಸ ಮಾಡಿ ಎಂದರು.

ಕೋವಿಡ್ ಚಿಕಿತ್ಸೆಗೆ ಮೀಸಲಾಗಿರುವ ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರರಾಗಿರುವ ಸಿಬ್ಬಂದಿಗಳು ಸೋಂಕಿತರಿಗೆ ಸರಿಯಾದ ಮಾಹಿತಿ ನೀಡಿ ಸಹಕರಿಸಲು ಸೂಚನೆ ನೀಡಿ ಎಂದರು ಹಾಗೂ ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಲಭ್ಯವಿರುವ ಕೋವಿಡ್ ಬೆಡ್‌ಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವಂತೆ ಸಲಹೆ ನೀಡಿದರು.

**ಶಿಫಾರಸ್ಸಿಗೆ ಮಣಿಯಬೇಡಿ :** ಆಕ್ಸಿಜನ್, ಬೆಡ್ ಹಂಚಿಕೆ ವಿಚಾರದಲ್ಲಿ ಯಾವುದೇ ಶಿಫಾರಸ್ಸಿಗೆ ಮಣಿಯಬೇಡಿ ಎಂದು ಸಿದ್ದೇಶ್ವರ ಕಿವಿಮಾತು ಹೇಳಿದರು.

ಆಕ್ಸಿಜನ್ ಬೆಡ್‌ಗಳ ಹಂಚಿಕೆ ವಿಷಯದಲ್ಲಿ ಯಾವುದೇ ಶಿಫಾರಸ್ಸಿಗೆ ಮಣಿಯಬೇಡಿ, ಜೀವ ಎಲ್ಲರದೂ ಒಂದೇ. ಈ ನಿಟ್ಟಿನಲ್ಲಿ ಮೊದಲು ಬಂದವರಿಗೆ ಆದ್ಯತೆ ನೀಡಿ ಬೆಡ್ ಹಂಚಿಕೆ ಮಾಡಿ. ಈ ವಿಷಯದಲ್ಲಿ ಯಾವುದೇ ರಾಜೀ ಬೇಡ ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪರಿವಾರದ ಪ್ರಮುಖರಾದ ಗೂ.ರುದ್ರಯ್ಯ, ಅಜಿತ್ ಓಸ್ವಾಲ್, ಅರುಣ್ ಗುಡ್ಡದಕೇರಿ, ಮಂಜಾನಾಯ್ಕ್, ಸೊಕ್ಕೆ ನಾಗರಾಜ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮುರುಘಾ ಮಠಕ್ಕೆ ವಿವಿ ಮಂಜೂರು : ಶರಣರ ಹರ್ಷ



ಚಿತ್ರದುರ್ಗ, ಮೇ 5- ಬರದ ಭೂಮಿಯಾದ ಚಿತ್ರದುರ್ಗಕ್ಕೆ ವೈದ್ಯಕೀಯ ಕಾಲೇಜಿನೊಂದಿಗೆ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿಯ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶರಣರು, ಜಗದ್ಗುರು ಮುರುಘ ರಾಜೇಂದ್ರ ವಿದ್ಯಾಪೀಠದ ಅಡಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕೆಂಬುದು ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮೀಜಿ ಮಹತ್ವಾಕಾಂಕ್ಷೆಯಾಗಿತ್ತು. ಅವರ ಇಚ್ಛೆಯನ್ನು ನೆರವೇರಿಸಲೆಂಬಂತೆ 20 ವರ್ಷಗಳ ಹಿಂದೆ ಬಸವೇಶ್ವರ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಆರಂಭಿಸಲಾಯಿತು ಎಂದರು.

ಶ್ರೀಮಠದ ಮಹತ್ವಾಕಾಂಕ್ಷೆ ಎಂದರೆ ನೂರಾರು ಸಂಸ್ಥೆಗಳನ್ನು ನಡೆಸುತ್ತಿರುವ ವಿದ್ಯಾಪೀಠವು ಒಂದು ವಿಶ್ವವಿದ್ಯಾಲಯವಾಗಿ ಕಾರ್ಯ ನಿರ್ವಹಿಸಬೇಕೆಂಬುದು. ಅದನ್ನು ಅಧಿಕಾರದಲ್ಲಿರುವ ಸರ್ಕಾರದಿಂದ ಮೇಲ್ಮನೆ ಮತ್ತು ಕೆಳಮನೆ ಎರಡೂ ಸದನಗಳಲ್ಲಿ ಮಂಡನೆಯಾಗಿ ಮುಂದೆ ಅದು ರಾಜ್ಯಪಾಲರ ಅನುಮೋದನೆಯೊಂದಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಣೆಯಾಗಿರುತ್ತದೆ. ಈ ಸಂದರ್ಭದಲ್ಲಿ ಸರ್ಕಾರ ಮತ್ತು ರಾಜ್ಯಪಾಲರನ್ನು ಅಭಿನಂದಿಸಲಾಯಿತು.

ಸಭೆಯ ನಡಾವಳಿಯಲ್ಲಿ ಕುಲಾಧಿಪತಿಯ ಆಯ್ಕೆ ಪ್ರಕ್ರಿಯೆಯು ಸೇರಿದ್ದು, ಸರ್ವ ಸದಸ್ಯರು ಸೇರಿಕೊಂಡು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರ ಹೆಸರನ್ನು ಜಮುರಾ ವಿಶ್ವವಿದ್ಯಾಲಯದ ಕುಲಾಧಿಪತಿಯ ಸ್ಥಾನಕ್ಕೆ ಆಡಳಿತ ಮಂಡಳಿ ಸದಸ್ಯ ಬಿ.ಎಸ್. ಷಣ್ಮುಖಪ್ಪ ಅವರು ಸೂಚಿಸಿದರು. ಇಡೀ ಸಭೆ ಅದನ್ನು ಅನುಮೋದಿಸಿತು. ಕುಲಪತಿ, ಕುಲಸಚಿವ ಇತ್ಯಾದಿ ಅಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ಕುಲಾಧಿಪತಿಗಳಿಗೆ ನೀಡಲಾಯಿತು.

ಆಡಳಿತ ಮಂಡಳಿ ಸದಸ್ಯರಾದ ಕೆ. ವಿ.ಪ್ರಭಾಕರ್ ಹಿಂದಿನ ಸಭೆಯ ನಡಾವಳಿಗಳನ್ನು ಓದಿದರು. ಸಭೆಯಲ್ಲಿ ಎನ್. ಲಿಂಗಮೂರ್ತಿ, ಪಟೇಲ್ ಶಿವಕುಮಾರ್, ಹರ್ತಿಕೋಟೆ ವೀರೇಂದ್ರಸಿಂಹ, ಬಸವರಾಜ ಪಾಟೀಲ್ ಮೊದಲಾದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಎಂ.ಟಿ. ಮಲ್ಲಿಕಾರ್ಜುನ ಸ್ವಾಮಿ ವಂದಿಸಿದರು. ಉಮೇಶ್ ಪತ್ತಾರ ಪ್ರಾರ್ಥಿಸಿದರು.

# ವಿಪತ್ತು ನಿರ್ವಹಣಾ ವೆಚ್ಚ ಭರಿಸಲು ಹರಿಹರ ತಾ.ಗೆ 30 ಲಕ್ಷ ರೂ. ಬಿಡುಗಡೆ



ಹರಿಹರ, ಮೇ 5- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಹರಿಹರ ತಾಲ್ಲೂಕಿಗೆ ವಿಪತ್ತು ನಿರ್ವಹಣಾ ವೆಚ್ಚಗಳನ್ನು ಭರಿಸಲು 30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಮಳೆ ಬಂದು ರೈತರ ಬೆಳೆ ಮತ್ತು ಮನೆಗಳಿಗೆ ಹಾನಿ ಸಂಭವಿಸಿದರೆ ಮತ್ತು ಕೊರೊನಾ ರೋಗವು ಹೆಚ್ಚಾಗಿ ಉಲ್ಬಣಗೊಂಡರೆ ಹಾಗೂ ಇತರೆ ತುರ್ತು ಪರಿಸ್ಥಿತಿಯನ್ನು ಸುಧಾರಣೆ ತರುವುದಕ್ಕೆ ಜಿಲ್ಲಾಧಿಕಾರಿಗಳು ಹರಿಹರ ತಾಲ್ಲೂಕಿಗೆ 30 ಲಕ್ಷ ರೂ. ಬಿಡುಗಡೆ ಮಾಡಿದ್ದಾರೆ.

ಆ ಹಣ ಲೋಪವಾಗದಂತೆ ರೈತರ ಬೆಳೆ ಹಾನಿಗೆ ಮತ್ತು ಮಳೆ ಹೆಚ್ಚಾಗಿ ಬಂದು ಮನೆಗಳು ಹಾನಿಗೊಳಗಾದ ಕುಟುಂಬಕ್ಕೆ ಮತ್ತು ಕೊರೊನಾ ರೋಗವನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಬಳಕೆ ಮಾಡಲಾಗುತ್ತದೆ ಎಂದರು.

ಗುತ್ತೂರು ಬಳಿ ಕೋವಿಡ್ ಕೇರ್ ಸೆಂಟರ್ ತೆಗೆದು ಅಲ್ಲಿ ಕೊರೊನಾ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ, ಔಷಧಿ, ಮಾತ್ರೆ, ಬಿಸಿನೀರು, ಕುಡಿಯಲು ಶುದ್ಧ ಬಿಸಿಲೇರಿ ವಾಟರ್, ಗುಣಮಟ್ಟದ ಆಹಾರ, ಬೆಡ್, ವೈದ್ಯಕೀಯ ಸೇವೆ ಸೇರಿದಂತೆ ಹಲವಾರು ಸೇವೆಗಳನ್ನು ರೋಗಿಗಳಿಗೆ ಒದಗಿಸಲಾಗುತ್ತಿದೆ. ಬಿಎಲ್‌ಓ ರವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜಾಗ್ರತೆ ಯನ್ನು ಮೂಡಿಸಲು ಸಹ ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಮತ್ತು ಪೌರಾಯುಕ್ತೆ ಎಸ್ ಲಕ್ಷ್ಮಿ ಅವರಿಗೆ ಸೂಚಿಸಲಾಗಿದೆ.

ಗ್ರಾಮ ಪಂಚಾಯತಿ ವತಿಯಿಂದ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ಯಾನಿಟೈಸ್ ಮಾಡುವುದಕ್ಕೆ ತಾಪಂ ಇಓ ಗಂಗಾಧರನ್ ಅವರಿಗೆ ಸೂಚಿಸಲಾಗಿದೆ. ನಗರದಲ್ಲಿ ಸಹ ಕಾನೂನು ಉಲ್ಲಂಘನೆ ಮಾಡಿ ಸಾರ್ವಜನಿಕರು ಓಡಾಡುವುದನ್ನು ತಡೆಗಟ್ಟಲು ಪೊಲೀಸ್ ಇಲಾಖೆಯ ಸಿಪಿಐ ಸತೀಶ್ ಕುಮಾರ್ ಮತ್ತು ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ ಅವರಿಗೆ ಮತ್ತು ಲಕ್ಷ್ಮಿ ಅವರಿಗೆ ಸೂಚನೆ ನೀಡಲಾಗಿತ್ತು. ಅದರಲ್ಲಿ ಪೌರಾಯುಕ್ತ ರಾದ ಎಸ್. ಲಕ್ಷ್ಮಿ ಅವರು ಸುಮಾರು 83 ಸಾವಿರ ರೂ. ಸಾರ್ವಜನಿಕರಿಂದ ದಂಡ ವಸೂಲಿ ಮಾಡಿದ್ದಾರೆ.

ಪ್ರತಿ ನಿತ್ಯವೂ ಸಂಜೆ ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್, ಡಾ ಹನುಮನಾಯಕ್, ಇಓ ಗಂಗಾಧರನ್, ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್ ಅವರಗಳ ಸಮ್ಮುಖದಲ್ಲಿ ಸಾರ್ವಜನಿಕರ ಒಳಿತಿಗಾಗಿ ಏನು ಮಾಡಬೇಕಾಗುತ್ತದೆ ಎಂದು ಸಭೆಯಲ್ಲಿ ನಿರ್ಣಯವನ್ನು ಮಾಡಿ ನಂತರ ಅದರಂತೆ ಕೆಲಸ ಕಾರ್ಯವನ್ನು ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

# ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳ



**ಹರಪನಹಳ್ಳಿ**

ಹರಪನಹಳ್ಳಿ, ಮೇ 5- ತಾಲ್ಲೂಕಿನಾದ್ಯಂತ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಇರುವ 40 ಬೆಡ್‌ಗಳು ಭರ್ತಿಯಾಗಿದ್ದು, ಲಸಿಕೆ ಸಹ ಕೊರತೆಯಾಗಿದೆ.

ಈ ಕುರಿತು ಮಾಹಿತಿ ನೀಡಿದ ತಾಲ್ಲೂಕು ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ ಅವರು, 68 ಆಕ್ಸಿಜನ್ ಸಿಲಿಂಡರ್‌ಗಳು ಇದ್ದು, ಪ್ರತಿ ದಿನ ಹರಿಹರ, ಹೊಸಪೇಟೆ ಅಥವಾ ಕೊಪ್ಪಳಗಳಿಗೆ ಖಾಲಿಯಾದ ಸಿಲಿಂಡರ್‌ಗಳನ್ನು ಕಳುಹಿಸಿ ತುಂಬಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು. ಇನ್ನೂ 20 ಸಿಲಿಂಡರ್‌ಗಳಿಗಾಗಿ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇವೆ ಎಂದು ತಾಲ್ಲೂಕು ಆಸ್ಪತ್ರೆ ಆಡಳಿತಾಧಿಕಾರಿ ಡಾ. ಶಿವಕುಮಾರ ತಿಳಿಸಿದ್ದಾರೆ. ಇನ್ನೂ ಹೆಚ್ಚುವರಿ 10-15 ಬೆಡ್‌ಗಳ ಸಿದ್ಧತೆ ಸಹ ಮಾಡುವ ಯೋಜನೆ ಇದೆ ಎಂದು ಅವರು ತಿಳಿಸಿದರು.

ಐದು ವೆಂಟಿಲೇಟರ್‌ಗಳು ಇವೆ. ಕೋವ್ಯಾಕ್ಸಿನ್ ದಾಸ್ತಾನು ಇಲ್ಲ. ಈ ವಾರದಲ್ಲಿ ಬರುತ್ತದೆ ಎಂದು ನಿರೀಕ್ಷಿಸಲಾಗಿದೆ. ಸದ್ಯಕ್ಕೆ ಕೋವಿಶೀಲ್ಡ್ ಇದ್ದು, ಅದೂ ಸಹ ಎರಡನೇ ಡೋಸ್ ಹಾಕಿಸಿಕೊಳ್ಳುವರಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಟಿಎಚ್‌ಓ ವೆಂಕಟೇಶ್ ಹೇಳಿದರು.

ಈಗಾಗಲೇ ತಾಲ್ಲೂಕಿನಲ್ಲಿ ಅಂದಾಜು 40 ಸಾವಿರ ಜನರಿಗೆ ಲಸಿಕೆಯನ್ನು ಹಾಕಲಾಗಿದೆ. ಆಕ್ಸಿಜನ್ ಅವಲಂಬಿತ 19 ಜನ ಕೋವಿಡ್ ರೋಗಿಗಳು ಸಾರ್ವಜನಿಕ ಆಸ್ಪತ್ರೆಯಲ್ಲಿದ್ದಾರೆ ಎಂದು ಅವರು ತಿಳಿಸಿದರು.

# ಹರಿಹರ ತಾಲ್ಲೂಕಿನಲ್ಲಿ ಒಂದೇ ದಿನ 107 ಜನರಿಗೆ ಪಾಸಿಟಿವ್

**ಜಿಗಳಿಯಲ್ಲಿ ಸೋಂಕಿಗೆ ಓರ್ವ ಬಲಿ**

ಮಲೇಬೆನ್ನೂರು, ಮೇ 5- ಜಿಗಳಿ ಗ್ರಾಮದ 52 ವರ್ಷದ ವ್ಯಕ್ತಿಯೋರ್ವ ಕೊರೊನಾ ಸೋಂಕಿಗೆ ಬಲಿಯಾದ ಘಟನೆ ಬುಧವಾರ ಬೆಳಿಗ್ಗೆ ನಡೆದಿದೆ.

ಜ್ವರ, ಮೈ-ಕೈ ನೋವು ಇದ್ದ ಕಾರಣ ಸೋಮವಾರ ಕೋವಿಡ್ ಟೆಸ್ಟ್ ಮಾಡಿಸಿದ್ದು, ಟೆಸ್ಟ್ ಪಾಸಿಟಿವ್ ಬಂದ ಹಿನ್ನೆಲೆಯಲ್ಲಿ ಮಂಗಳ ವಾರ ಸಂಜೆ ಹರಿಹರ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಮಂಗಳವಾರ ಬೆಳಿಗ್ಗೆ ಉಸಿರಾಟದಲ್ಲಿ ತೊಂದರೆ ಉಂಟಾಗಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ನಂತರ ಕೋವಿಡ್ ಮಾರ್ಗಸೂಚಿ ಯಂತೆ ಜಿಗಳಿ ಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ಮೃತ ವ್ಯಕ್ತಿಯ ಅಂತ್ಯಕ್ರಿಯೆ ನೆರವೇರಿತು.

**ಯುವಕರೇ ಹೆಚ್ಚು ಬಲಿ :** ಮೂಲಗಳ ಪ್ರಕಾರ ಕಳೆದ ಒಂದು ವಾರದಲ್ಲಿ ಭಾನುವಳ್ಳಿ, ಯಲವಟ್ಟಿ, ಮಲೇಬೆನ್ನೂರು, ಹನಗವಾಡಿ ಗ್ರಾಮಗಳಲ್ಲಿ 50 ವರ್ಷ ಒಳಗಿನ ಯುವಕರು ಉಸಿರಾಟದ ತೊಂದರೆಯಿಂದಾಗಿ ಕೊರೊನಾ ಸೋಂಕಿಗೆ ಬಲಿಯಾಗಿದ್ದಾರೆ ಎಂದು ಹೇಳಲಾಗಿದೆ.


**ಒಂದೇ ದಿನ 107 ಕೇಸು :** ಮಂಗಳವಾರ ಒಂದೇ ದಿನ ಹರಿಹರ ತಾಲ್ಲೂಕಿನಲ್ಲಿ 107 ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ.

ಇದರಲ್ಲಿ 62 ಜನ ಹರಿಹರ, ಮಲೇಬೆನ್ನೂರಿನವರಾಗಿದ್ದು, 45 ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. 107 ಜನರಲ್ಲಿ 61 ಪುರುಷರು ಮತ್ತು 46 ಮಹಿಳೆಯರು ಇದ್ದಾರೆ. ಬುಧವಾರ ಸಂಜೆ ಹೊತ್ತಿಗೆ ಸೋಂಕಿತರ ಸಂಖ್ಯೆ 25 ದಾಟಿತ್ತು ಎಂದು ತಿಳಿದು ಬಂದಿದೆ.

**ಮಲೇಬೆನ್ನೂರಿನಲ್ಲಿ ಮೂವರಿಗೆ ಸೋಂಕು :** ಪಟ್ಟಣದಲ್ಲಿ ಕೊರೊನಾ ಸೋಂಕು ಹರಡದಂತೆ ಪುರಸಭೆ ವತಿಯಿಂದ ಬುಧವಾರ ಸ್ಯಾನಿಟೈಜ್ ಮಾಡಲಾಯಿತು. ಮಂಗಳವಾರ ಪಟ್ಟಣದಲ್ಲಿ ಮೂವರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಅವರನ್ನು ಹರಿಹರ ಆಸ್ಪತ್ರೆಗೆ ಕಳುಹಿಸಲಾಗಿದೆ.

**81 ಜನರಿಗೆ ಲಸಿಕೆ :** ಬುಧವಾರ ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ 81 ಜನರಿಗೆ ಕೋವಿಡ್ ಲಸಿಕೆ ಹಾಕಲಾಗಿದೆ.

# ಪತ್ರಕರ್ತ ಕುಂದೂರು ಪರಮೇಶ್ ಆತ್ಮಹತ್ಯೆ



ದಾವಣಗೆರೆ, ಮೇ 5- ಪತ್ರಕರ್ತ ಕುಂದೂರು ಪರಮೇಶ್ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದವರಾದ ಪರಮೇಶ್, ಅಮರಾವತಿ ಬಳಿ ರೈಲಿಗೆ ಬಿದ್ದು ಇಂದು ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಿಗೆ ಕೆಲ ದಿನಗಳಿಂದ ಶೀತ, ಜ್ವರ, ಕೆಮ್ಮು ಇತ್ತು ಎನ್ನಲಾಗಿದೆ.

ಮೃತರು ಪತ್ನಿ, ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ಕುಂದೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಮೇಶ್, ಇಲ್ಲಿನ ಎಸ್‌ಡಿಎಂಸಿ ಸಮನ್ವಯ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು. ರಾಜ್ಯಮಟ್ಟದ ಪತ್ರಿಕೆಗೆ ಅರೆಕಾಲಿಕ ವರದಿಗಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ಸರ್ಕಾರಿ ಶಾಲೆಗಳ ಮೇಲೆ ಪ್ರೀತಿ, ಕಾಳಜಿ ಇಟ್ಟುಕೊಂಡಿದ್ದರು. ಗ್ರಾಮೀಣ ಸಮಸ್ಯೆಗಳ ಬಗ್ಗೆ ಬರಹಗಳ ಮೂಲಕ ಬೆಳಕು ಚೆಲ್ಲುತ್ತಿದ್ದರು.

ಪರಮೇಶ್ ಅವರ ಅಕಾಲಿಕ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ, ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಖಜಾಂಚಿ ಮಾಗನೂರು ಮಂಜಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

## ಹಿರಿಯ ಸಾಹಿತಿ ಜರಗನಹಳ್ಳಿ ಶಿವಶಂಕರ್ ನಿಧನ



ಬೆಂಗಳೂರು,ಮೇ 5- ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವ ಕಾರ್ಯದರ್ಶಿಯೂ ಆದ ನಾಡಿನ ಹಿರಿಯ ಸಾಹಿತಿ ಜರಗನಹಳ್ಳಿ ಶಿವಶಂಕರ್ ಅವರು ಇಂದು ಬೆಳಿಗ್ಗೆ ನಿಧನರಾದರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅವರಿಗೆ ನಾಡು-ನುಡಿಗೆ ಸಲ್ಲಿಸಿದ ಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಜರಗನಹಳ್ಳಿ ಶಿವಶಂಕರ್ ಅವರ ನಿಧನಕ್ಕೆ ದಾವಣಗೆರೆಯ ಕನ್ನಡ ಉಪನ್ಯಾಸಕರೂ ಆದ ಸಾಹಿತಿ ಜಂಬಗಿ ಮೃತ್ಯುಂಜಯ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಮಾಸ್ಕ್ ಧರಿಸದ ಪ್ರಕರಣ : 2,66,700 ರೂ. ದಂಡ ವಸೂಲಿ

ದಾವಣಗೆರೆ, ಮೇ 5- ಕೊರೊನಾ ಸೋಂಕು ಹರಡುವಿಕೆ ತಡೆಗಟ್ಟಲು ಹಾಗೂ ಮುಂಜಾಗ್ರತಾ ದೃಷ್ಟಿಯಿಂದ ಮಾಸ್ಕ್ ಮತ್ತು ಸ್ಯಾನಿಟೈಸರ್ ಬಳಕೆ ಹಾಗೂ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಎಷ್ಟೇ ಜಾಗೃತಿ ಮೂಡಿಸಿ, ದಂಡ ಹಾಕುವ ಮುಖೇನ ಬಿಸಿ ಮುಟ್ಟಿಸಿದರೂ ಕೆಲವರಿಗೆ ಇನ್ನೂ ಬುದ್ಧಿ ಬಂದಂತೆ ಕಾಣುತ್ತಿಲ್ಲ.

ಜಿಲ್ಲೆಯಲ್ಲಿ ಕೊರೊನಾ ಪ್ರಕರಣ ದಿನೇ ದಿನೇ ಹೆಚ್ಚುತ್ತಾ, ಆಸ್ಪತ್ರೆಗಳಲ್ಲಿ ಬೆಡ್‌ಗಳು, ಆಮ್ಲಜನಕ, ವೆಂಟಿಲೇಟರ್ ಸಿಗದೇ ಸಾವು - ನೋವು ಕಾಣಲಾಗುತ್ತಿದೆ. ಹೀಗಿದ್ದರೂ ಕೆಲ ಸಾರ್ವಜನಿಕರು ಕೊರೊನಾದ ಯಾವುದೇ ಭಯವಿಲ್ಲದೇ ಮಾಸ್ಕ್ ಧರಿಸದೇ ಓಡಾಡುವುದು ಮಾತ್ರ ನಿಂತಿಲ್ಲ.

ಇದಕ್ಕೆ ಇಂದು ಜಿಲ್ಲೆಯಲ್ಲಿ ಮಾಸ್ಕ್ ಧರಿಸದೇ ಓಡಾಡಿದ ಒಟ್ಟು 1558 ಪ್ರಕರಣಗಳು ದಾಖಲಾಗಿರುವುದೇ ಸಾಕ್ಷಿಯಾಗಿದೆ. ಒಟ್ಟು 2,66,700 ರೂ. ದಂಡ ವಸೂಲಾಗಿದೆ. ಮಂಗಳವಾರವೂ ಸಹ ಒಟ್ಟು 1558 ಮಾಸ್ಕ್ ಧರಿಸದ ಪ್ರಕರಣಗಳು ದಾಖಲಾಗಿವೆ. ಒಟ್ಟು 2,59,800 ರೂ. ದಂಡ ವಸೂಲಾಗಿದೆ.

**ರಂಜಾನ್ ರೋಜಾ ಸಮಯ**

| ದಿನಾಂಕ : 06.05.2021 | ದಿನಾಂಕ : 07.05.2021 |
| --- | --- |
| ಇಫ್ತೇಯಾರಿ | ಸಹೇರಿ |
| ಸಮಯ : 6-50 | ಸಮಯ : 4-44 |

## ಉತ್ತರದಲ್ಲಿ ಬ್ರಿಟನ್ ರೂಪಾಂತರಿ, ಕರ್ನಾಟಕದಲ್ಲಿ ಡಬಲ್ ಮ್ಯುಟೆಂಟ್

ನವದೆಹಲಿ, ಮೇ 5 – ಉತ್ತರ ಭಾರತದಲ್ಲಿ ಬ್ರಿಟನ್ ರೂಪಾಂತರಿ ಕೊರೊನಾ ವೈರಸ್ ಸೋಂಕು ಹರಡಿದ್ದರೆ, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಡಬಲ್ ಮ್ಯುಟೆಂಟ್ ವೈರಸ್ ಹರಡಿದೆ ಎಂದು ರಾಷ್ಟ್ರೀಯ ಸೋಂಕು ನಿಯಂತ್ರಣ ಕೇಂದ್ರ (ಎನ್.ಸಿ.ಡಿ.ಸಿ.) ನಿರ್ದೇಶಕ ಸುರ್ಜೀತ್ ಸಿಂಗ್ ಹೇಳಿದ್ದಾರೆ. ಆದರೆ, ಬ್ರಿಟನ್ ರೂಪಾಂತರಿ ವೈರಸ್ ಪ್ರಮಾಣ ಕಳೆದ ಒಂದೂವರೆ ತಿಂಗಳಿನಿಂದ ದೇಶಾದ್ಯಂತ ಕಡಿಮೆಯಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಫೆಬ್ರವರಿಯಿಂದ ನಿರಂತರವಾಗಿ ರಾಜ್ಯಗಳ ಜೊತೆ ಈ ವೈರಸ್‌ಗಳ ಕುರಿತ ಮಾಹಿತಿ ಹಂಚಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ಮಹಾರಾಷ್ಟ್ರ, ಕರ್ನಾಟಕ, ಪಶ್ಚಿಮ ಬಂಗಾಳ, ದೆಹಲಿ ಹಾಗೂ ಗುಜರಾತ್‌ಗಳಲ್ಲಿ ಡಬಲ್ ಮ್ಯುಟೇಷನ್ ವೈರಸ್ ಹೆಚ್ಚಾಗಿದೆ ಎಂದವರು ಹೇಳಿದ್ದಾರೆ.

ತೆಲಂಗಾಣ ಹಾಗೂ ದೆಹಲಿಗಳಲ್ಲಿ ದಕ್ಷಿಣ ಆಫ್ರಿಕಾದ ರೂಪಾಂತರಿ ವೈರಸ್ ಹೆಚ್ಚಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ.


**ಶಿವಮ್ಮನವರ ಪುಣ್ಯತಿಥಿ ಕಾರ್ಯಕ್ರಮ**




ಜನನ : 1949 ನಿಧನ : 24-04-2021

ಚಿತ್ರದುರ್ಗ ಜಿಲ್ಲೆ, ತಾಲ್ಲೂಕು ಬೆಳಗಟ್ಟ ಗ್ರಾಮದ
ದಿ|| ಎ.ಡಿ. ನಾಗಪ್ಪನವರ ಧರ್ಮಪತ್ನಿ
ಶ್ರೀಮತಿ ಶಿವಮ್ಮ
ಇವರು ದಿನಾಂಕ 24.04.2021ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ ಪುಣ್ಯತಿಥಿ ಕಾರ್ಯಕ್ರಮವನ್ನು ದಿನಾಂಕ 9-5-2021 ನೇ ಭಾನುವಾರ ದಾವಣಗೆರೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದೇವೆ.

ಬಂಧುಗಳು ಮತ್ತು ಸ್ನೇಹಿತರು ತಾವಿರುವೆಡೆಯಲ್ಲಿಯೇ ಮೃತರ ಆತ್ಮಕ್ಕೆ ಶಾಂತಿ ಕೋರಿ, ಶ್ರದ್ಧಾಂಜಲಿ ಸಲ್ಲಿಸಲು ಕೋರಿದೆ.

ಇಂತಿ ದುಃಖತಪ್ತರು : ಮಕ್ಕಳಾದ ಎನ್. ಜಗದೀಶ, ಆರ್.ಟಿ.ಓ. ಕಚೇರಿ, ದಾವಣಗೆರೆ ಎನ್. ಕೆಂಚಪ್ಪ, ಮಹಾನಗರ ಪಾಲಿಕೆ, ದಾವಣಗೆರೆ ಮತ್ತು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ. : 9481250699, 9482103193

**ಜಿ.ಇ. ಶಾರದಮ್ಮ ನಿಧನ**



ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಗುಂಜಿಗನೂರು ಗ್ರಾಮದ ಅಬ್ಬಿಗೆರೆ ವಂಶಸ್ಥರಾದ ದಾವಣಗೆರೆ ಸಿಟಿ ಶಾಮನೂರು ಡಾಲರ್ಸ್‌ಕಾಲೋನಿ ವಾಸಿ ದಿ|| ಹೆಚ್. ಅಜ್ಜಪ್ಪನವರ ಧರ್ಮಪತ್ನಿ ಶ್ರೀಮತಿ ಜಿ.ಇ. ಶಾರದಮ್ಮ ಅವರು ದಿನಾಂಕ 05-05-2021ರ ಬುಧವಾರ ಬೆಳಿಗ್ಗೆ 8 ಗಂಟೆಗೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05-05-2021ರಂದು ಮಧ್ಯಾಹ್ನ 4 ಗಂಟೆಗೆ ಶಾಮನೂರು ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು.

- ದುಃಖತಪ್ತ ಕುಟುಂಬ ವರ್ಗ, ಫೋ. : 9343031014

**ಎಸ್.ಟಿ. ಮಹಂತಮ್ಮ ನಿಧನ**



ಜನನ : 21-01-1949 ಮರಣ : 05-05-2021

ದಾವಣಗೆರೆ ತಾಲ್ಲೂಕು ಐಗೂರು ಗ್ರಾಮದ ವಾಸಿ ಲಿಂ|| ಗಂಗಾಧರಪ್ಪ ಅವರ ಪತ್ನಿ ಶ್ರೀಮತಿ ಎಸ್.ಟಿ. ಮಹಂತಮ್ಮ ಅವರು ದಿನಾಂಕ 05-05-2021ರ ಬುಧವಾರ ಸಂಜೆ 6.30 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06-06-2021ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಐಗೂರು ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಫೋ. : 63661 92426


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte